ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ



ವಾರಣಾಸಿಯಲ್ಲಿ ಕಾಶಿ ವಿಶ್ವನಾಥನ ಸನ್ನಿಧಿಗೆ ಪೂಜಿ ಸಲ್ಲಿಸಿ ಕೈಯಲ್ಲಿ ತ್ರಿಶೂಲ ಮತ್ತು ಡಮರುಗ ಹಿಡಿದ ಪ್ರಧಾನಿ ನರೇಂದ್ರ ಮೋದಿ

30 ಏಪ್ರಿಲ್ 2026 ಗುರುವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ : 51 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629



ಹಳಿ ತಪ್ಪುತ್ತಿದೆ ಭಾರತೀಯ ಕುಟುಂಬ ವ್ಯವಸ್ಥೆ » 2



ಸ್ಮಶಾನ ಜಾಗಕ್ಕಾಗಿ ಎರೆಬೊರೆ ಕಾವಲ್ ಗ್ರಾಮಸ್ಥರ ಒತ್ತಾಯ » 3



ವಿನಯ ಕುಲಕರ್ಣಿ ಶಾಸಕತ್ವ ರದ್ದು » 4

# ಪಶ್ಚಿಮ ಬಂಗಾಳ, ಅಸ್ಸಾಂನಲ್ಲೂ ಬಿಜೆಪಿ ಕಮಾಲ್

- ತಮಿಳುನಾಡಿನಲ್ಲಿ ಮತ್ತೆ ಡಿಎಂಕೆ
- ಕೇರಳದಲ್ಲಿ ಯುಡಿಎಫ್
- ಪುದುಚೇರಿಯಲ್ಲಿ ಮತ್ತೊಮ್ಮೆ ಕಮಲ ಸಾಧ್ಯತೆ

• ಪ್ರಜೋದಯ ವರದಿ

**ನವದೆಹಲಿ:** ಪಶ್ಚಿಮ ಬಂಗಾಳದಲ್ಲಿನ 2ನೇ ಹಂತದ ಮತದಾನ ಅಂತ್ಯವಾಗುತ್ತಲೇ ಚುನಾವಣೋತ್ತರ ಸಮೀಕ್ಷೆ ಫಲಿತಾಂಶ ಹೊರಬಿದ್ದಿದೆ. ಪಶ್ಚಿಮ ಬಂಗಾಳದಲ್ಲಿ ಹಾಲಿ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿಗೆ ಹಿನ್ನಡೆಯಾಗಿದೆ. ಬಿಜೆಪಿ ಅಧಿಕಾರ ಚುಕ್ಕಾಣಿ ಹಿಡಿಯುವ ಸಾಧ್ಯತೆ ಇದೆ ಎಂದು ಹೇಳಲಾಗುತ್ತಿದೆ.

ಸಮೀಕ್ಷೆ ಪ್ರಕಾರ ತಮಿಳುನಾಡಿನಲ್ಲಿ ಡಿಎಂಕೆ ಮತ್ತು ಕಾಂಗ್ರೆಸ್ ಮೈತ್ರಿಕೂಟ ಅಧಿಕಾರಕ್ಕೆ ಬರಲಿದೆ. ಕೇರಳದಲ್ಲಿ ಕಾಂಗ್ರೆಸ್ ಬೆಂಬಲಿತ ಯುಡಿಎಫ್ ಬಹುಮತ ಪಡೆಯಲಿದ್ದು, ಬಿಜೆಪಿ ಸೋಲನ್ನು ಅನುಭವಿಸಲಿದೆ. ಪುದುಚೇರಿಯಲ್ಲಿ ಬಿಜೆಪಿ ಮತ್ತೊಮ್ಮೆ ಸರ್ಕಾರ ರಚಿಸುವ ಸಾಧ್ಯತೆ ಇದೆ ಎಂದು ಊಹಿಸಲಾಗಿದೆ.

ಏ.9 ರಂದು ಅಸ್ಸಾಂನ 126 ಕ್ಷೇತ್ರಗಳು, ಕೇರಳದ 140 ಕ್ಷೇತ್ರಗಳು ಮತ್ತು ಪುದುಚೇರಿಯ 30 ಕ್ಷೇತ್ರಗಳಿಗೆ ಏಕಕಾಲದಲ್ಲಿ ವಿಧಾನಸಭಾ ಚುನಾವಣೆ ನಡೆಯಿತು. ಏ.23ರಂದು ತಮಿಳುನಾಡಿನ ಎಲ್ಲಾ 234 ಕ್ಷೇತ್ರಗಳಿಗೆ ಮತದಾನ ನಡೆಯಿತು. ಪಶ್ಚಿಮ ಬಂಗಾಳದಲ್ಲಿ 152 ಕ್ಷೇತ್ರಗಳಿಗೆ ಮೊದಲ ಹಂತದ ಮತದಾನ ಏ.23ರಂದು ಮತ್ತು ಅಂತಿಮ ಹಂತದ ಮತದಾನ ಬುಧವಾರ ನಡೆಯಿತು. ಈ 5 ರಾಜ್ಯಗಳ ಚುನಾವಣಾ ಫಲಿತಾಂಶ ಮೇ 4ರಂದು ಹೊರಬೀಳಲಿದೆ. ಆದರೆ, ಅದಕ್ಕೂ ಮುನ್ನವೇ ಚುನಾವಣೋತ್ತರ ಸಮೀಕ್ಷೆ ಪ್ರಕಟವಾಗಿದೆ.

ಇನ್ನು ತೀವ್ರ ಕುತೂಹಲ ಕೆರಳಿಸಿದ್ದ ಪಶ್ಚಿಮ ಬಂಗಾಳದಲ್ಲಿ ಆಡಳಿತ ವಿರೋಧಿ ಅಲೆ ನೆಪದಲ್ಲೇ ಬಿಜೆಪಿ ಅಧಿಕಾರ ಹಿಡಿಯಲಿದೆ ಎಂದು ಹೇಳಲಾಗುತ್ತಿದೆ. ಹಾಲಿ ಲಭಿಸಿರುವ ಚುನಾವಣೋತ್ತರ ಸಮೀಕ್ಷೆಗಳಲ್ಲಿ ಮ್ಯಾಟ್ರಿಜ್, ಪ್ರಜಾ ಸಮೀಕ್ಷೆ, ಸಮೀಕ್ಷೆಯ ದಿನಚರಿ ಮತ್ತು ಚಾಣಕ್ಯ ಚುನಾವಣೋತ್ತರ ಸಮೀಕ್ಷೆಗಳಲ್ಲಿ ಬಿಜೆಪಿ ಅಧಿಕಾರದ ಗದ್ದುಗೆ ಏರಲಿದೆ ಎಂದು ಭವಿಷ್ಯ ನುಡಿದಿವೆ. ಆದರೆ, ಆಕ್ಸಿಸ್ ಮೈ ಇಂಡಿಯಾ ಸಮೀಕ್ಷೆಯು ಪಶ್ಚಿಮ ಬಂಗಾಳದಲ್ಲಿ ತೃಣಮೂಲ ಕಾಂಗ್ರೆಸ್ ಸುಮಾರು 190 ಸ್ಥಾನಗಳನ್ನು ಗಳಿಸುವ



ನಿರೀಕ್ಷೆಯಿದ್ದು, ಭಾರತೀಯ ಜನತಾ ಪಕ್ಷವು ಸುಮಾರು 90 ಸ್ಥಾನಗ ಳನ್ನು ಗಳಿಸುವ ಮೂಲಕ 2ನೇ ಸ್ಥಾನ ಪಡೆಯುವ ಕುರಿತು ಮಾಹಿತಿ ನೀಡಿದೆ.

**ಅಸ್ಸಾಂನಲ್ಲೂ ಬಿಜೆಪಿ ಮ್ಯಾಜಿಕ್**

ಅಸ್ಸಾಂನಲ್ಲೂ ಬಿಜೆಪಿ ಅಧಿಕಾರದ ಗದ್ದುಗೆ ಏರಲಿದೆ ಎಂದು ಚುನಾವಣೋತ್ತರ ಸಮೀಕ್ಷೆಗಳು ಊಹಿಸಿವೆ. 7 ಚುನಾವಣೋತ್ತರ ಸಮೀಕ್ಷೆಗಳ ಪೈಕಿ ಏಳರಲ್ಲೂ ಅಸ್ಸಾಂನಲ್ಲಿ ಬಿಜೆಪಿಯೇ ಅಧಿ ಕಾರದಲ್ಲಿ ಮುಂದುವರೆಯಲಿದೆ ಎಂದು ಊಹಿಸಿವೆ. ಕಾಂಗ್ರೆಸ್ ಮೈತ್ರಿ ಕೂಟ 2ನೇ ಸ್ಥಾನಕ್ಕೆ ತೃಪ್ತಿಪಟ್ಟುಕೊಳ್ಳಬೇಕಿದೆ ಎನ್ನಲಾಗಿದೆ.

**ತಮಿಳುನಾಡಿನಲ್ಲಿ ಡಿಎಂಕೆ**

ದಕ್ಷಿಣದ ಪ್ರಮುಖ ರಾಜ್ಯವಾದ ತಮಿಳುನಾಡಿನಲ್ಲಿ ಆಡಳಿತಾರೂಢ ಡಿಎಂಕೆ ಅಧಿಕಾರವನ್ನು ಉಳಿಸಿಕೊಳ್ಳಲಿದೆ ಎಂದು ಬಹುತೇಕ ಚುನಾವಣೋತ್ತರ ಸಮೀಕ್ಷೆಗಳು ಹೇಳಿವೆ. ಪ್ರಮುಖವಾಗಿ ಮ್ಯಟ್ರಿಜ್ ಸಂಸ್ಥೆ ಡಿಎಂಕೆ ನೇತೃತ್ವದ ಮೈತ್ರಿಕೂಟಕ್ಕೆ 122-132 ಸ್ಥಾನ ನೀಡಿದ್ದರೆ, ಎಐಎಡಿಎಂಕೆ ನೇತೃತ್ವದ ಮೈತ್ರಿಕೂಟಕ್ಕೆ 87-100 ಸ್ಥಾನಗಳನ್ನು ನೀಡಿದೆ.

ಹಾಗೆಯೇ ಇತರರು ಕೇವಲ 6 ಸ್ಥಾನಗಳಲ್ಲಿ ಜಯ ಸಾಧಿಸಲಿದ್ದಾರೆಂದು ಮ್ಯಾಟ್ರಿಜ್ ಹೇಳಿದೆ. ನಟ ವಿಜಯ್ ಸ್ಥಾಪಿತ ಟಿವಿಕೆ ಪಕ್ಷ, ಈ ಬಾರಿಯ ಚುನಾವಣೆಯಲ್ಲಿ ಉತ್ತಮ ಪ್ರದರ್ಶನ ಮಾಡಿರುವ ಸಾಧ್ಯತೆ ಇದೆ.

**ಪುದುಚೇರಿಯಲ್ಲಿ ಎನ್‌ಆರ್‌ಸಿ**

ಕೇಂದ್ರಾಡಳಿತ ಪ್ರದೇಶ ಪುದುಚೇರಿಯಲ್ಲಿ ಚುನಾವಣೋತ್ತರ ಸಮೀಕ್ಷೆಗಳು 2021ರ ಫಲಿತಾಂಶವನ್ನೇ ಪ್ರತಿಬಿಂಬಿಸಿವೆ. ಆಕ್ಸಿಸ್ ಮೈ ಇಂಡಿಯಾ ಚುನಾವಣೋತ್ತರ ಸಮೀಕ್ಷೆಯ ಪ್ರಕಾರ ಪುದುಚೇರಿಯಲ್ಲಿ ಎನ್‌ಆರ್‌ಸಿ ಪಕ್ಷ 16-20 ಸ್ಥಾನಗಳನ್ನು, ಕಾಂಗ್ರೆಸ್ 6-8 ಸ್ಥಾನಗಳನ್ನು ಮತ್ತು ಟಿವಿಕೆ ಪಕ್ಷ 2-4 ಸ್ಥಾನಗಳನ್ನು ಜಯಿಸುವ ಸಾಧ್ಯತೆ ಇದೆ ಎನ್ನಲಾಗಿದೆ.

**ಕೇರಳದಲ್ಲಿ ಯುಡಿಎಫ್**

ದೇವರ ನಾಡು ಕೇರಳದಲ್ಲಿ ಈ ಬಾರಿ ಕಾಂಗ್ರೆಸ್ ನೇತೃತ್ವದ ಯುಡಿಎಫ್ ಮೈತ್ರಿಕೂಟ ಜಯಭೇರಿ ಬಾರಿಸಲಿದೆ ಎಂದು ಚುನಾವಣೋತ್ತರ ಸಮೀಕ್ಷೆಗಳು ಅಂದಾಜಿಸಿವೆ. ಮ್ಯಾಟ್ರಿಜ್ ಸಮೀಕ್ಷೆ ಪ್ರಕಾರ ಯುಡಿಎಫ್ ಮೈತ್ರಿಕೂಟಕ್ಕೆ 75-85, ಎಲ್‌ಡಿಎಫ್ ಮೈತ್ರಿಕೂಟಕ್ಕೆ 60-65 ಸ್ಥಾನಗಳು ಲಭಿಸಲಿವೆ. ರಾಜ್ಯದಲ್ಲಿ ಎನ್‌ಡಿಎ ಮೈತ್ರಿಕೂಟ 0-3 ಸ್ಥಾನಗಳನ್ನು ಗಳಿಸಬಹುದೆಂದು ಅಂದಾಜಿಸಿದೆ.

**(ಪಂಚರಾಜ್ಯ ಚುನಾವಣೋತ್ತರ ಸಮೀಕ್ಷೆ ಪ್ರಕಟ)**

(ಪಶ್ಚಿಮ ಬಂಗಾಳ ಸಮೀಕ್ಷೆ)
ಮ್ಯಾಟ್ರಿಜ್
ಬಿಜೆಪಿ: 146-161
ಟಿಎಂಸಿ: 125-140
ಇತರರು: 6-10
ಪ್ರಜಾ ಸಮೀಕ್ಷೆ
ಬಿಜೆಪಿ: 178-208
ಟಿಎಂಸಿ: 85-110
ಇತರರು: 0-5
ಚಾಣಕ್ಯ
ಬಿಜೆಪಿ: 150-160
ಟಿಎಂಸಿ: 130-140
ಇತರರು: 6-10
(ಅಸ್ಸಾಂ ಸಮೀಕ್ಷೆ)
ಎಕ್ಸಿಸ್ ಮೈ ಇಂಡಿಯಾ
ಬಿಜೆಪಿ: 88-100
ಕಾಂಗ್ರೆಸ್: 24-36
ಪೀಪಲ್ಸ್ ಇನ್‌ಸೈಟ್
ಬಿಜೆಪಿ: 88-96
ಕಾಂಗ್ರೆಸ್: 30-34
ಮ್ಯಾಟ್ರಿಜ್
ಬಿಜೆಪಿ: 85-95
ಕಾಂಗ್ರೆಸ್: 25-32
(ಕೇರಳದ ಸಮೀಕ್ಷೆ)
ಆಕ್ಸಿಸ್ ಮೈ ಇಂಡಿಯಾ
ಯುಡಿಎಫ್: 78-90
ಎಲ್‌ಡಿಎಫ್: 49-62
ಎನ್‌ಡಿಎ: 03
ಮ್ಯಾಟ್ರಿಜ್
ಯುಡಿಎಫ್: 70-75
ಎಲ್‌ಡಿಎಫ್: 60-65
ಎನ್‌ಡಿಎ: 3-5
ವೋಟ್‌ವೈಬ್
ಎಲ್‌ಡಿಎಫ್: 58-68
ಯುಡಿಎಫ್: 70-80
ಎನ್‌ಡಿಎ: 0-4
(ತಮಿಳುನಾಡು ಸಮೀಕ್ಷೆ)
ಮ್ಯಾಟ್ರೈಜ್ ಇಂಡಿಯಾ
ಡಿಎಂಕೆ : 122-132
ಎಐಎಡಿಎಂಕೆ : 87-100
ಟಿವಿಕೆ : 10-12
ಪಿ-ಮಾರ್ಕ್
ಡಿಎಂಕೆ: 125-145
ಎಐಎಡಿಎಂಕೆ : 65-85
ಟಿವಿಕೆ : 16-26
ಪಿಎಂಎಆರ್‌ಕ್ಯೂ
ಡಿಎಂಕೆ: 125-145
ಎಐಎಡಿಎಂಕೆ: 65-85 ಟ
ಟಿವಿಕೆ 16-26
(ಪುದುಚೇರಿ ಸಮೀಕ್ಷೆ)
ಆಕ್ಸಿಸ್ ಮೈ ಇಂಡಿಯಾ
ಬಿಜೆಪಿ: 16- 20
ಕಾಂಗ್ರೆಸ್: 6-8
ಇತರೆ: 3- 7

## ನಾಲೆಗೆ ಬಿದ್ದ ಕಾರು: ತಾಯಿ, ಮಗು ಸಾವು



• ಪ್ರಜೋದಯ ವರದಿ

**ಚನ್ನರಾಯಪಟ್ಟಣ :** ಚಾಲಕನ ನಿಯಂತ್ರಣ ತಪ್ಪಿ ಕಾರೊಂದು ಹೇಮಾವತಿ ನಾಲೆಗೆ ಬಿದ್ದ ಪರಿಣಾಮ ತಾಯಿ ಹಾಗು ಒಂದೂವರೆ ವರ್ಷ ಮಗು ಸ್ಥಳದಲ್ಲೇ ಸಾವನ್ನಪ್ಪಿದ್ದು, ನಾಲ್ವರು ಗಂಭೀರವಾಗಿ ಗಾಯಗೊಂಡಿರುವ ಘಟನೆ ತಾಲ್ಲೂಕಿನ ಮಲ್ಲನಘಟ್ಟ ಗ್ರಾಮದಲ್ಲಿ ಬುಧವಾರ ನಡೆದಿದೆ.

ಬೆಂಗಳೂರಿನ ದೇವನಹಳ್ಳಿಯ ನಿವಾಸಿ ಪ್ರಿಯಾಂಕ(30) ಹಾಗು ವೈಭವ್(ಒಂದೂವರೆ ವರ್ಷ) ಮೃತಪಟ್ಟಿದ್ದಾರೆ. ಮಂಜುನಾಥ್, ಪತ್ನಿ ಪ್ರಿಯಾಂಕ, ಪುತ್ರ ವೈಭವ್, ಸಂಬಂಧಿಗಳಾದ ಚಂದನ್, ದಿಲೀಪ್, ದೇವರಾಜು ಅವರು ಸ್ವಿಫ್ಟ್ ಕಾರಿನಲ್ಲಿ ಧರ್ಮಸ್ಥಳಕ್ಕೆ ಹೋಗಿ ವಾಪಾಸ್ ಮನೆಗೆ ತೆರಳುತ್ತಿದ್ದ ವೇಳೆ ತಾಲ್ಲೂಕಿನ ಮಲ್ಲನಘಟ್ಟ ಗ್ರಾಮದ ಬಳಿಯ ರಾಷ್ಟ್ರೀಯ ಹೆದ್ದಾರಿಯಲ್ಲಿ ಕಾರು ಚಾಲಕನ ನಿಯಂತ್ರಣ ತಪ್ಪಿ ರಸ್ತೆ ಪಕ್ಕದಲ್ಲಿದ್ದ ಹೇಮಾವತಿ ನಾಲೆಗೆ ಬಿದ್ದಿದೆ. ಕಾರು ನೆಲಕ್ಕೆ ಅಪ್ಪಳಿಸಿದ ರಭಸಕ್ಕೆ ತಾಯಿ-ಮಗು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ತಕ್ಷಣ ನೆರವಿಗೆ ಧಾವಿಸಿದ ಸ್ಥಳೀಯರು ಕಾರಿನೊಳಗೆ ಸಿಲುಕಿದ್ದವರನ್ನು ಹೊರ ತೆಗೆದು, ಗಾಯಾಳುಗಳಿಗೆ ತಾಲ್ಲೂಕು ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿ, ಹೆಚ್ಚಿನ ಚಿಕಿತ್ಸೆಗಾಗಿ ಹಾಸನಕ್ಕೆ ಕಳುಹಿಸಲಾಯಿತು. ನಾಲೆಯಲ್ಲಿ ನೀರಿಲ್ಲದ ಕಾರಣ ಕಾರು ನೆಲಕ್ಕೆ ಅಪ್ಪಳಿಸಿದ್ದರಿಂದ ಸಾವು ಸಂಭವಿಸಿದೆ. ನೀರಿದ್ದರೆ ಇನ್ನೂ ಹೆಚ್ಚಿನ ಅನಾಹುತವಾಗುತ್ತಿತ್ತು. ಪಟ್ಟಣ ಸಂಚಾರಿ ಠಾಣೆ ಪೊಲೀಸರು ಪರಿಶೀಲನೆ ನಡೆಸಿ ಪ್ರಕರಣ ದಾಖಲಿಸಿಕೊಂಡಿದ್ದಾರೆ. ನಜ್ಜುಗುಜ್ಜಾಗಿದ್ದ ಕಾರನ್ನು ನಾಲೆಯಿಂದ ಮೇಲೆತ್ತಲಾಯಿತು.

## ಮುಖ್ಯೋಪಾಧ್ಯಾಯ ಹುದ್ದೆಗೆ ಬಡ್ತಿ: ಸಹ ಶಿಕ್ಷಕರ ಹರ್ಷ



• ಪ್ರಜೋದಯ ವರದಿ

**ಹಾಸನ:** ರಾಜ್ಯದ ಪ್ರಾಥಮಿಕ ಶಾಲಾ ಸಹ ಶಿಕ್ಷಕರಿಗೆ ಬಹುಕಾಲದಿಂದ ನಿರೀಕ್ಷೆಯಲ್ಲಿದ್ದ ಮುಖ್ಯೋಪಾಧ್ಯಾಯರ ಹುದ್ದೆಯ ಬಡ್ತಿ ಪ್ರಕ್ರಿಯೆಗೆ ಚಾಲನೆ ದೊರೆತ ಹಿನ್ನಲೆ ಶಿಕ್ಷಕರು ಹರ್ಷ ವ್ಯಕ್ತಪಡಿಸಿದ್ದಾರೆ.

ನಗರದ ಮಹಾವೀರ ವೃತ್ತದ ಸಮೀಪದ ಸಮಗ್ರ ಶಿಕ್ಷಣ ಕರ್ನಾಟಕ ಕಚೇರಿ ಮುಂದೆ ಶಿಕ್ಷಕರು ಸಂತೋಷ ವ್ಯಕ್ತಪಡಿಸಿದರು. ಈ ವೇಳೆ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷೆ ಚೈತ್ರ ನಾಯಕರಹಳ್ಳಿ ಅವರು ಮಾತನಾಡಿ, ಶಿಕ್ಷಣ ಇಲಾಖೆಯ ಇತಿಹಾಸದಲ್ಲೇ ಇದೇ ಮೊದಲ ಬಾರಿಗೆ ಇಷ್ಟು ದೊಡ್ಡ ಪ್ರಮಾಣದಲ್ಲಿ ಬಡ್ತಿ ನೀಡಲಾಗುತ್ತಿದ್ದು, ರಾಜ್ಯದಾದ್ಯಂತ ಕೌನ್ಸಲಿಂಗ್ ಪ್ರಕ್ರಿಯೆ ಆರಂಭಗೊಂಡಿದೆ. ಸಂಘಟನೆಯ ದೀರ್ಘ ಹೋರಾಟ, ನಿಯಮ ತಿದ್ದುಪಡಿ ಹಾಗೂ ಸರ್ಕಾರದೊಂದಿಗೆ ನಿರಂತರ ಸಂವಾದದಿಂದ ಈ ಸಾಧನೆ ಸಾಧ್ಯವಾಗಿದೆ ಎಂದು ಹೇಳಿದರು.

ಮುಖ್ಯವಾಗಿ ಟಿಇಟಿ ಕಡ್ಡಾಯ ನಿಯಮ ರದ್ದುಪಡಿಸಿರುವುದು ಬಡ್ತಿ ಪ್ರಕ್ರಿಯೆಗೆ ವೇಗ ತಂದಿದ್ದು, ಸಾವಿರಾರು ಶಿಕ್ಷಕರಿಗೆ ಅನುಕೂಲವಾಗಿದೆ. ಜಿಲ್ಲೆಯಲ್ಲಿ ಕನ್ನಡ ವಿಭಾಗದ 35 ಮತ್ತು ಉರ್ದು ವಿಭಾಗದ 3 ಸಹ ಶಿಕ್ಷಕರು ಸೇರಿ ಒಟ್ಟು 38 ಮಂದಿಗೆ ಮುಖ್ಯೋಪಾಧ್ಯಾಯರ ಹುದ್ದೆ ಲಭಿಸಿದ್ದು, ಶಿಕ್ಷಕರ ಹಕ್ಕು ಮತ್ತು ಶಿಕ್ಷಣ ವ್ಯವಸ್ಥೆಯ ಬಲವರ್ಧನೆಗೆ ಮಹತ್ವದ ಹೆಜ್ಜೆಯಾಗಿದೆ ಎಂದರು.

# ಮಲೆನಾಡು ತಾಂತ್ರಿಕ ಶಿಕ್ಷಣ ಸಮಿತಿ ಹಗ್ಗಾಜಗ್ಗಾಟಕ್ಕೆ ತೆರೆ

- ಅಶೋಕ್ ಹಾರನಹಳ್ಳಿ ಅವರ ನೇತೃತ್ವದ ತಂಡಕ್ಕೆ ಮತ್ತೆ ಅಧಿಕಾರ
- ಹೈಕೋರ್ಟ್ ಏಕ ಸದಸ್ಯ ಪೀಠ ಅಂತಿಮ ಆದೇಶ

• ಪ್ರಜೋದಯ ವರದಿ

**ಹಾಸನ:** ಮಲೆನಾಡು ತಾಂತ್ರಿಕ ಶಿಕ್ಷಣ ಸಮಿತಿ ಆಡಳಿತ ಮಂಡಳಿ ಚುಕ್ಕಾಣಿ ಹಿಡಿಯಲು ಹಲವು ತಿಂಗಳುಗಳಿಂದ ಎರಡು ತಂಡಗಳ ನಡುವೆ ನಡೆಯುತ್ತಿದ್ದ ಜಟಾಪಟಿಗೆ ಬುಧವಾರ ಹೈಕೋರ್ಟ್ ತೆರೆ ಎಳೆದಿದೆ. ಆ ಮೂಲಕ ಅಶೋಕ್ ಹಾರನಹಳ್ಳಿ ಅವರ ನೇತೃತ್ವದ ತಂಡಕ್ಕೆ ಗೆಲುವಾಗಿದೆ.

ಅವಿಶ್ವಾಸ ಮಂಡನೆ ಬಳಿಕ ವಾದ- ಪ್ರತಿವಾದನ್ನು ಆಲಿಸಿ ತೀರ್ಪು ಕಾಯ್ದಿರಿಸಿದ್ದ ಹೈಕೋರ್ಟ್, ಬುಧವಾರ ಮಧ್ಯಾಹ್ನ ನ್ಯಾಯಮೂರ್ತಿ ಕೃಷ್ಣಕುಮಾರ್ ಅವರಿದ್ದ ಏಕ ಸದಸ್ಯ ಪೀಠ ಅಂತಿಮ ತೀರ್ಪನ್ನು ಪ್ರಕಟಿಸಿ, ಆಡಳಿತ ಮಂಡಳಿ ಸಮಿತಿಯಲ್ಲಿ ಬಹುಮತ ಕಳೆದುಕೊಂಡಿರುವ ಆರ್.ಟಿ.ದ್ಯಾವೇಗೌಡ ಮತ್ತವರ ತಂಡ, ತಕ್ಷಣವೇ ಅಶೋಕ್ ಹಾರನಹಳ್ಳಿ ಅವರ ತಂಡದ ಬಿ.ಆರ್.ಗುರುದೇವ್ ಅವರಿಗೆ ಅಧಿಕಾರ ಹಸ್ತಾಂತರಿಸಬೇಕೆಂದು ನಿರ್ದೇಶನ ನೀಡಿದೆ.

ಸಮಿತಿಯ ಆಡಳಿತ ಚುಕ್ಕಾಣಿಯನ್ನು ಹಿಡಿಯುವ ವಿಚಾರದಲ್ಲಿ ಉಂಟಾದ ಭಿನ್ನಾಭಿಪ್ರಾಯಗಳು ಕ್ರಮೇಣ ತೀವ್ರಗೊಂಡು ಆರೋಪ-ಪ್ರತ್ಯಾರೋಪಗಳಿಗೆ ಕಾರಣವಾಗಿದ್ದವು. ಬಳಿಕ ಈ ವಿವಾದ ನ್ಯಾಯಾಲಯದ ಮೆಟ್ಟಿಲೇರಿದ್ದು, ಎರಡೂ ಬಣಗಳು ತಮ್ಮ ತಮ್ಮ ವಾದಗಳನ್ನು ಪ್ರಬಲವಾಗಿ ಮಂಡಿಸಿದ್ದವು. ಅಂತಿಮವಾಗಿ ನ್ಯಾಯಾಲಯ ಮಂಡಳಿಯ ಸಂಖ್ಯಾಬಲವನ್ನು ಪರಿಗಣಿಸಿ ತೀರ್ಪು ಪ್ರಕಟಿಸಿದೆ.

ಅಶೋಕ್ ಹಾರನಹಳ್ಳಿ ಅವರ ತಂಡವು ಸರಳ ಬಹುಮತವನ್ನು ದೃಢವಾಗಿ ಸಾಬೀತು ಪಡಿಸಿರುವುದನ್ನು ಅಂಗೀಕರಿಸಲಾಗಿದೆ. ಬಿ. ಆರ್.ಗುರುದೇವ್ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ಪುರಸ್ಕರಿಸಲಾಗಿದೆ. ಇದರೊಂದಿಗೆ





ಗುರುದೇವ್ ಅವರು ತಕ್ಷಣದಿಂದಲೇ ಸಮಿತಿಯ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಳ್ಳಬಹುದಾಗಿದೆ ಎಂದು ಸ್ಪಷ್ಟಪಡಿಸಲಾಗಿದೆ. ಹಾಲಿ ಅಧ್ಯಕ್ಷರಾಗಿದ್ದ ಆರ್.ಟಿ. ದ್ಯಾವೇಗೌಡ ಅವರು ತಮ್ಮ ಹುದ್ದೆಯ ಅಧಿಕಾರವನ್ನು ತಕ್ಷಣವೇ ಹಸ್ತಾಂತರಿಸಬೇಕು ಹಾಗು ಮುಂದಿನ ಆಡಳಿತದಲ್ಲಿ ಯಾವುದೇ ರೀತಿಯ ಹಸ್ತಕ್ಷೇಪ ಮಾಡಬಾರದೆಂದು ನ್ಯಾಯಾಲಯ ಕಟ್ಟುನಿಟ್ಟಿನ ಸೂಚನೆ ನೀಡಿದೆ.

ಪ್ರಕರಣದ ಮಧ್ಯಂತರ ಹಂತದಲ್ಲಿ ಮಂಡಳಿಯ ಬಹುಮತವನ್ನು ತಿಳಿಯಲು ಫೆ.12ರಂದು ಹೈಕೋರ್ಟ್ ವೀಕ್ಷಕರನ್ನು ನೇಮಿಸಿತ್ತು. ಹಿರಿಯ ವಕೀಲ ಉಮಾಶಂಕರ್ ಹಾಸನಕ್ಕೆ ಭೇಟಿ ನೀಡಿ ಸದಸ್ಯರ ಬೆಂಬಲವನ್ನು

» ನಾಲ್ಕನೇ ಪುಟದಲ್ಲಿ



"ನಮ್ಮ ವಾದವನ್ನು ಹೈಕೋರ್ಟ್ ಎತ್ತಿ ಹಿಡಿದಿದೆ. ನ್ಯಾಯಾಲಯದ ಆದೇಶಕ್ಕೆ ತಲೆಬಾಗಿ ಅಧಿಕಾರ ಬಿಟ್ಟು ಕೊಡಬೇಕು. ಕಾರ್ಯಕಾರಿ ಸಮಿತಿ ಯಲ್ಲಿ 14 ಜನರಿದ್ದರೂ ಅಧಿಕಾರ ಬಿಟ್ಟು ಕೊಡದೆ 10 ಜನರು ಸೇರಿಕೊಂಡು ಹಠ ಮಾಡಿಕೊಂಡು ಕುಳಿತಿದ್ದಾರೆ. ಈಗಲಾದರೂ ತಾವಾಗಿಯೇ ಅಧಿಕಾರ ಬಿಟ್ಟುಕೊಡಬೇಕು.

- ಅಶೋಕ್ ಹಾರನಹಳ್ಳಿ, ಮಾಜಿ ಅಧ್ಯಕ್ಷರು



"ನ್ಯಾಯಾಲಯ ನಮ್ಮ ಪರವಾಗಿ ನೀಡಿರುವ ತೀರ್ಪನ್ನು ಸ್ವಾಗತಿಸುತ್ತೇವೆ. ಅಧಿಕಾರ ವಹಿಸಿಕೊಳ್ಳುವ ಬಗ್ಗೆ ಅಶೋಕ್ ಹಾರನಹಳ್ಳಿ ಅವರೊಂದಿಗೆ ಚರ್ಚಿಸಿ ತಿಳಿಸಲಾಗುವುದು. ಬಹುಮತ ಇಲ್ಲದಿದ್ದರೂ ಅಧಿಕಾರ ಬಿಟ್ಟು ಕೊಡಲು ಸತಾಯಿಸಿದವರಿಗೆ ನ್ಯಾಯಾಲ ಯವೇ ಸೂಕ್ತ ಆದೇಶ ನೀಡಿದೆ.

-ಬಿ.ಆರ್.ಗುರುದೇವ್, ನಿಯೋಜಿತ ಅಧ್ಯಕ್ಷರು



"ನ್ಯಾಯಾಲಯದ ತೀರ್ಪಿನ ಅಧಿಕೃತ ಪ್ರತಿ ಇನ್ನೂ ಲಭ್ಯವಾಗಿಲ್ಲ. ಪ್ರತಿ ಸಿಕ್ಕ ಬಳಿಕ ವಕೀಲರೊಂದಿಗೆ ಚರ್ಚಿಸಿ ಮುಂದಿನ ಕ್ರಮ ಕೈಗೊಳ್ಳುತ್ತೇವೆ. ವ್ಯತಿರಿಕ್ತ ತೀರ್ಪು ಬಂದಲ್ಲಿ ನಾವು ಸುಪ್ರೀಂ ಕೋರ್ಟ್ ನಲ್ಲಿ ಮೇಲ್ಮನವಿ ಸಲ್ಲಿಸುವುದಕ್ಕೂ ಎಲ್ಲಾ ಸಿದ್ಧತೆ ಮಾಡಿಕೊಂಡಿದ್ದೇವೆ. 15-16 ತಿಂಗಳ ಆಡಳಿತ ಅವಧಿಯಲ್ಲಿ ನಾವು ಮಾಡಿದ ಕೆಲಸದ ಬಗ್ಗೆ ಎಲ್ಲರಲ್ಲೂ ಉತ್ತಮ ಭಾವನೆ ವ್ಯಕ್ತವಾಗಿದೆ. ಮುಂದಿನ ತೀರ್ಮಾನ ಆದೇಶ ಓದಿದ ಬಳಿಕ ಪ್ರಕಟಿಸುತ್ತೇವೆ.

- ಚೌಡಹಳ್ಳಿ ಜಗದೀಶ್, ಕಾರ್ಯದರ್ಶಿ

# ಕುಡಿಯುವ ನೀರಿಗೆ ತೊಂದರೆಯಾಗದಂತೆ ಕ್ರಮಕ್ಕೆ ಸೂಚನೆ

• ಪ್ರಜೋದಯ ವರದಿ

**ಹಾಸನ :** ಜಿಲ್ಲೆಯಲ್ಲಿ ಕುಡಿಯುವ ನೀರಿಗೆ ತೊಂದರೆಯಾಗದಂತೆ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳುವಂತೆ ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲಾಧಿಕಾರಿ ಕಚೇರಿಯಲ್ಲಿ ಬುಧವಾರ ಜಿಲ್ಲೆಯ ಎಲ್ಲಾ ನಗರ ಸ್ಥಳೀಯ-ಸಂಸ್ಥೆಗಳ ವ್ಯಾಪ್ತಿಯಲ್ಲಿ ವಿವಿಧ ವಿಷಯಗಳ ಕುರಿತ ಸಭೆಯಲ್ಲಿ ಮಾತನಾಡಿದ ಅವರು, ಕುಡಿಯವ ನೀರಿನ ಅಭಾವ ಉಂಟಾಗ ಬಹುದಾದ ದುರ್ಬಲ ಪ್ರದೇಶಗಳು ಹಾಗೂ ಹಿಂದಿನ ವರ್ಷ ಕುಡಿಯವ ನೀರಿನ ಸಮಸ್ಯೆ ಉಂಟಾಗಿರುವ ವಾರ್ಡ್‌ಗಳನ್ನು ಗುರುತಿಸಿ ಟ್ಯಾಂಕರ್ ಹಾಗೂ ಖಾಸಗಿ ಬೋರ್‌ವೆಲ್





ಮಾಲೀಕರುಗಳೊಂದಿಗೆ ಒಡಂಬಡಿಕೆ ಮಾಡಿಕೊಂಡು ನೀರು ಒದಗಿಸಬೇಕೆಂದು ಹೇಳಿದರು.

ತಾಪಮಾನ ಹೆಚ್ಚಿದ್ದು, ಉಂಟಾಗಬಹುದಾದ ಆರೋಗ್ಯ ಸಮಸ್ಯೆಗೆ ಸಲಹೆಗಳು, ಪರಿಣಾಮಗಳ ವಿವರ ಹಾಗು ಪ್ರಥಮ ಚಿಕಿತ್ಸೆಗಳ ಬಗ್ಗೆ ಜನರಲ್ಲಿ ಹೆಚ್ಚಿನ ಜಾಗೃತಿ ಮೂಡಿಸಬೇಕು. ಕುಡಿಯುವ ನೀರಿನ ಅಭಾವದ ಕುರಿತು ಎಲ್ಲಾ ಕಾರ್ಯ ನಿರ್ವಹಣಾ ಅಧಿಕಾರಿಗಳು ವರದಿಯನ್ನು ಸಲ್ಲಿಸುವ ಜೊತೆಗೆ ಕುಡಿಯುವ ನೀರಿನ ಕುರಿತು ಸಹಾಯವಾಣಿ ನಿರಂತರವಾಗಿ ಕಾರ್ಯನಿರ್ವಹಿಸುವಂತೆ ನೋಡಿಕೊಳ್ಳುವಂತೆ ನಿರ್ದೇಶನ ನೀಡಿದರು.

ನಗರ ಸ್ಥಳೀಯ-ಸಂಸ್ಥೆಗಳ ವ್ಯಾಪ್ತಿಯ ಶಾಲೆಗಳು ಇ-ಖಾತಾ ಮಾಡಿಸಬೇಕು. ಇದಕ್ಕೆ ಶಿಕ್ಷಣ ಇಲಾಖೆ ಹಾಗೂ ನಗರ ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳು ಸಮನ್ವಯತೆಯಿಂದ ಕರ್ತವ್ಯ ನಿರ್ವಹಿಸಬೇಕು. ಖಾತೆಗೆ ಬಾಕಿ ಇರುವುದನ್ನು ಪೂರ್ಣಗೊಳಿಸಲು ಕ್ರಮಕೈಗೊಳ್ಳಬೇಕು. ಹಾಸನ ಹಸಿರು ಯೋಜನೆಯಡಿ ಕ್ರಿಯಾ ಯೋಜನೆ ಸಿದ್ಧಪಡಿಸಬೇಕು. ಶಾಲೆಗಳ ಮೈದಾನದ ಸುತ್ತ, ಕೆರೆ ಏರಿಗಳ ಸುತ್ತ, ರಸ್ತೆ ಬದಿಯಲ್ಲಿ ಗಿಡಗಳನ್ನು ಬೆಳೆಸ ಬೇಕು. ಬೇಲೂರು, ಸಕಲೇಶಪುರ ಹಾಗೂ ಆಲೂರು ತಾಲ್ಲೂಕು ವ್ಯಾಪ್ತಿಯಲ್ಲಿ ಕಾಡಾನೆ ಹಾವಳಿ ಪ್ರದೇಶದಲ್ಲಿರುವ ಶಾಲೆಗಳನ್ನು ಗುರುತಿಸಿ ಪಟ್ಟಿ ಮಾಡಿ ನೀಡುವಂತೆ ಸೂಚಿಸಿದ ಅವರು, ವಾಹನ ವ್ಯವಸ್ಥೆ ಕಲ್ಪಿಸಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗುವುದೆಂದು ತಿಳಿಸಿದರು. ಸಭೆಯಲ್ಲಿ ಜಿ.ಪಂ.ಉಪ ಕಾರ್ಯದರ್ಶಿ ಬಾಬು, ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕರಾದ ರುದ್ರಮುನಿ, ಶಾಲಾ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ಬಲರಾಮ್, ಎಲ್ಲಾ ತಾಲ್ಲೂಕು ಮುಖ್ಯಾಧಿಕಾರಿಗಳು ಇದ್ದರು.

## ಯುವಕ ಆತ್ಮಹತ್ಯೆ

**ಬೇಲೂರು :** ಮದುವೆ ಮಾಡಿಕೊಳ್ಳಲು ಯುವತಿ ಸಿಗಲಿಲ್ಲವೆಂದು ಮನ ನೊಂದ ಯುವಕನೊಬ್ಬ ಕಲ್ಯಾಣಿಗೆ ಬಿದ್ದು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಪಟ್ಟಣದಲ್ಲಿ ನಡೆದಿದೆ. ವಿನಯ್ (35) ಆತ್ಮಹತ್ಯೆಗೆ ಶರಣಾದ ಯುವಕ.

ವಿನಯ್ ಮೂಲತಃ ಚಿಕ್ಕಮಗಳೂರು ಜಿಲ್ಲೆ, ಆಲ್ದೂರು ತಾಲ್ಲೂಕಿನ, ಗುಡ್ಡೂರು ಗ್ರಾಮದವನೆಂದು ತಿಳಿದು ಬಂದಿದೆ. ಹತ್ತು ವರ್ಷಗಳಿಂದ ಪಟ್ಟಣದ ಶಂಕರದೇವರ ಪೇಟೆಯಲ್ಲಿ ಎಲೆಕ್ಟ್ರಿಷಿಯನ್ ಕೆಲಸ ಮಾಡುತ್ತಿದ್ದ. ಮದುವೆಯಾಗಲು ಐದಾರು ವರ್ಷಗಳಿಂದ ಹುಡುಗಿ ಹುಡುಕುತ್ತಿದ್ದ. ಮದುವೆ ಆಗದ ಕಾರಣಕ್ಕೆ ಮನ ನೊಂದು ಕಲ್ಯಾಣಿಗೆ ಬಿದ್ದು ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಮೀನುಗಾರರ ನೆರವಿನಿಂದ ಅಗ್ನಿಶಾಮಕ ದಳದ

## ಎನ್‌ಸಿಇಆರ್‌ಟಿ ಪಠ್ಯಕ್ರಮಕ್ಕೆ ವಿರುದ್ಧವಾಗಿ ಎಲ್‌ಬಿಎ ವಿಧಾನ

### ನಿವೃತ್ತ ಉಪ ಪ್ರಾಂಶುಪಾಲ ಟಿ.ಎಂ.ಪಾರ್ಥಸಾರಥಿ ಬೇಸರ

• ಪ್ರಜೋದಯ ವರದಿ

**ಹಾಸನ:** ರಾಜ್ಯದಲ್ಲಿರುವ ಎನ್‌ಸಿಇಆರ್‌ಟಿ ಪಠ್ಯಕ್ರಮದ ಆಶಯಕ್ಕೆ ವಿರುದ್ಧವಾಗಿ ಎಲ್‌ಬಿಎ (ಕಂಠಪಾಠ) ವಿಧಾನವನ್ನು ಹೇರಿಕೆ ಮಾಡಿರುವುದರಿಂದ ವಿದ್ಯಾರ್ಥಿಗಳಿಗೆ ಅನ್ಯಾಯವಾಗುತ್ತಿದೆ ಎಂದು ನಿವೃತ್ತ ಉಪ ಪ್ರಾಂಶುಪಾಲ ಟಿ.ಎಂ.ಪಾರ್ಥಸಾರಥಿ ಆರೋಪಿಸಿದರು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ 6 ರಿಂದ 10ನೇ ತರಗತಿಯವರೆಗೆ ಜಾರಿಯಲ್ಲಿರುವ ಎನ್‌ಸಿಇಆರ್‌ಟಿ ರೂಪಿಸಿರುವ ವಿಜ್ಞಾನ ಪಠ್ಯಕ್ರಮ ಉತ್ತಮವಾಗಿದೆ. ಅದನ್ನೇ ಎಲ್ಲೆಡೆ ಪರಿಣಾಮಕಾರಿಯಾಗಿ ಜಾರಿಗೊಳಿಸಬೇಕು. ಈ





ಪಠ್ಯಕ್ರಮ ವಿದ್ಯಾರ್ಥಿಗಳಿಗೆ ಜ್ಞಾನ ಹಾಗು ಕೌಶಲ್ಯ ಬೆಳೆಸುವ ಉದ್ದೇಶ ಹೊಂದಿದೆ. ಆದರೆ ಡಿಎಸ್‌ಇಆರ್‌ಟಿ ನಿರ್ದೇಶಕರು ಈ ಪಠ್ಯಕ್ರಮದ ಆಶಯಕ್ಕೆ ವಿರುದ್ಧವಾಗಿ ಎಲ್‌ಬಿಎ ವಿಧಾನವನ್ನು ಹೇರಿಕೆ ಮಾಡಲು ಹೊರಟಿದ್ದಾರೆಂದು ದೂರಿದರು.

10ನೇ ತರಗತಿ ವಿಜ್ಞಾನ ವಿಷಯದಲ್ಲಿ ಪ್ರತಿಯೊಂದು ಅಧ್ಯಾಯದಲ್ಲೂ 10 ರಿಂದ 15 ಪ್ರಯೋಗ ಒಳಗೊಂಡಂತೆ ಸುಮಾರು 200ಕ್ಕೂ ಹೆಚ್ಚು ಭೌತ ಶಾಸ್ತ್ರ, ರಸಾಯನಶಾಸ್ತ್ರ ಹಾಗು ಜೀವ ಶಾಸ್ತ್ರ ಚಟುವಟಿಕೆಗಳನ್ನು ಎನ್‌ಸಿಇಆರ್‌ಟಿ ಅಳವಡಿಸಿದೆ. ಈ ಮೂಲಕ ವಿದ್ಯಾರ್ಥಿಗಳು ಕೇವಲ ಕಂಠ ಪಾಠಕ್ಕೆ ಸೀಮಿತವಾಗದೆ, ಪ್ರಯೋಗಗಳ ಮೂಲಕ ವಿಷಯವನ್ನು ಅರ್ಥಮಾಡಿಕೊಂಡು ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಿದ್ಧರಾಗುವಂತೆ ಪಠ್ಯಕ್ರಮ ರೂಪಿಸಲಾಗಿದೆ ಎಂದರು.

ಡಿಎಸ್‌ಇಆರ್‌ಟಿ ನಿರ್ದೇಶಕರು 30 ರಿಂದ 40 ಅಂಕ ಬರುವ ರೀತಿಯ ಕೆಲ ಪ್ರಶ್ನೆಗಳನ್ನು ಶಾಲೆಗಳಿಗೆ ನೀಡಿ, ಅವುಗಳನ್ನು ಎಲ್‌ಬಿಎ ವಿಧಾನದಲ್ಲಿ

» 2ನೇ ಪುಟದಲ್ಲಿ

## ನಾಳೆ ಬುದ್ಧ ಪೌರ್ಣಿಮೆ ಆಚರಣೆ

• ಪ್ರಜೋದಯ ವರದಿ

**ಹಾಸನ :** ನಗರದ ಕಲಾಭವನದಲ್ಲಿ ಮೇ 1ರಂದು ಬೆಳಿಗ್ಗೆ 11 ಗಂಟೆಗೆ ಬುದ್ಧ ಪೌರ್ಣಿಮೆಯನ್ನು ಆಚರಿಸಲಾಗುವುದೆಂದು ಭಾರತೀಯ ಬೌದ್ಧ ಮಹಾಸಭಾದ ಜಿಲ್ಲಾಧ್ಯಕ್ಷ ಹೆಚ್.ಟಿ.ಬಸವರಾಜು ಅವರು ತಿಳಿಸಿದರು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬುದ್ಧರ 2570ನೇ ಪವಿತ್ರ ವೈಶಾಖ ಬುದ್ಧ ಪೌರ್ಣಿಮೆ ಬುದ್ಧ ಜಯಂತಿ ಅಂಗವಾಗಿ ನಗರದಲ್ಲಿ ಆಕರ್ಷಕ ಮೆರವಣಿಗೆ ನಡೆಯಲಿದೆ. ಯುದ್ಧ ಬೇಡ, ಬುದ್ಧ ಬೇಕೆಂಬ ಸಂದೇಶ ಇಂದಿಗೂ ಜಗತ್ತಿನಾದ್ಯಂತ ಶಾಂತಿಯ ಸಂಕೇತವಾಗಿ ಪ್ರತಿಧ್ವನಿಸುತ್ತಿದ್ದು, ಅವುಗಳನ್ನು ಜನತೆಗೆ ತಿಳಿಸುವುದು ಜಯಂತಿ ಉದ್ದೇಶ ಎಂದು ಹೇಳಿದರು.

ಅಂದು ಬೆಳಿಗ್ಗೆ 10.30ಕ್ಕೆ ಜಿಲ್ಲಾಧಿಕಾರಿ ಕಚೇರಿ ಆವರಣದಿಂದ ಕಲಾಭವನದವರೆಗೆ ಬುದ್ಧರ ಭಾವ ಚಿತ್ರದೊಂದಿಗೆ ಮೆರವಣಿಗೆಯು ಎನ್.ಆರ್.ವೃತ್ತ, ಮಹಾವೀರ ವೃತ್ತ ಮಾರ್ಗವಾಗಿ ಹಾಸನಾಂಬ ಕಲಾಕ್ಷೇತ್ರದವರೆಗೆ ಕಲಾ ತಂಡಗಳು, ಬುದ್ಧರ ರಥ, ಸಾಂಸ್ಕೃತಿಕ ಮೆರವಣಿಗೆ ಹಾಗು ವಿವಿಧ ಸಂಘಟನೆಗಳ ಭಾಗವಹಿಸುವಿಕೆಯಿಂದ ಭವ್ಯ ಶೋಭಾಯಾತ್ರೆ ನಡೆಯಲಿದೆ. ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣ ಭೈರೇಗೌಡ ಉದ್ಘಾಟಿಸಲಿದ್ದು, ಶಾಸಕ ಹೆಚ್.ಪಿ.ಸ್ವರೂಪ್ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಸಂಸದ ಸಂಸದ ಶ್ರೇಯಸ್ ಪಟೇಲ್, ಗೃಹ ಮಂಡಳಿ ಅಧ್ಯಕ್ಷ ಕೆ.ಎಂ. ಶಿವಲಿಂಗೇಗೌಡ, ವಿಧಾನ ಪರಿಷತ್ ಸದಸ್ಯರು ಭಾಗವಹಿಸಲಿದ್ದಾರೆ. ಎನ್.ಬಿ.ವೀರಭದ್ರಯ್ಯ ಉಪನ್ಯಾಸ ನೀಡುವರು ಎಂದರು.

ಒಕ್ಕೂಟದ ಪದಾಧಿಕಾರಿಗಳಾದ ಎನ್.ಬಿ. ವೀರಭದ್ರಯ್ಯ, ಎ.ಟಿ. ಮಲ್ಲೇಶ್, ಕಾರ್ಯದರ್ಶಿ ಕುಮಾರ್ ಗೌರವ್, ಕೆ.ಸಿ.ಶ್ರೀಧರ ಇದ್ದರು.

# ಬಿರುಗಾಳಿ-ಮಳೆ ಅಬ್ಬರ: ಜಿಲ್ಲೆಯಲ್ಲಿ ಅವಾಂತರ

### ಬೆಳೆ ಹಾನಿ | ಧರೆಗುರುಳಿದ ವಿದ್ಯುತ್ ಕಂಬ, ಮರಗಳು

• ಪ್ರಜೋದಯ ವರದಿ

**ಹಾಸನ :** ಜಿಲ್ಲೆಯ ಹಲವೆಡೆ ಮಂಗಳವಾರ ಸಂಜೆ ಹಾಗು ರಾತ್ರಿ ಸುರಿದ ಬಿರುಗಾಳಿ ಸಹಿತ ಭಾರೀ ಮಳೆಗೆ ಅಪಾರ ಪ್ರಮಾಣದ ಹಾನಿ ಸಂಭವಿಸಿದೆ.

ಹಾಸನ, ಹೊಳೆನರಸೀಪುರ, ಅರಕಲಗೂಡು, ಆಲೂರು, ಸಕಲೇಶಪುರ ತಾಲ್ಲೂಕು ಸೇರಿ ಹಲವೆಡೆ ಬಿರುಗಾಳಿಯೊಂದಿಗೆ ಸುರಿದ ಮಳೆಯ ಪರಿಣಾಮ ಬೆಳೆ ಹಾನಿಯಾಗಿ ರೈತರು ಸಂಕಷ್ಟ ಎದುರಿಸುವಂತಾಗಿದೆ. ಅರಕಲಗೂಡು ತಾಲ್ಲೂಕಿನ ಬಸವನಹಳ್ಳಿ ಕೊಪ್ಪಲು ಗ್ರಾಮದಲ್ಲಿ ಬಾಳೆ ತೋಟಗಳು ಸಂಪೂರ್ಣ ನೆಲಕಚ್ಚಿವೆ. ಕೊಯ್ಲಿಗೆ ಸಿದ್ಧವಾಗಿದ್ದ ಬಾಳೆ ಬಿರುಗಾಳಿ ನಾಶವಾಗಿದ್ದು, ರೈತರು ಲಕ್ಷಾಂತರ ರೂಪಾಯಿ ನಷ್ಟ ಅನುಭವಿಸಿದ್ದಾರೆ.

ರೈತರಾದ ಲೋಕೇಶ್, ಪರಮೇಶ್ ನಾಗರಾಜ್ ಹಾಗು ನಿಂಗರಾಜು ಅವರಿಗೆ ಸೇರಿದ ಸಾವಿರಾರು ಬಾಳೆ ಗಿಡಗಳು ಹಾನಿ



ಗೊಳಗಾಗಿವೆ. ಇನ್ನೊಂದು ತಿಂಗಳಲ್ಲಿ ಕಟಾವು ಮಾಡಲು ಸಿದ್ಧತೆ ಮಾಡಿಕೊಂಡಿದ್ದು, ಬೆಳೆ ಹಾನಿಯಾದ ಹಿನ್ನಲೆಯಲ್ಲಿ ರೈತರು ಸಂಕಷ್ಟಕ್ಕೆ ಸಿಲುಕಿದ್ದು, ತಕ್ಷಣ ಪರಿಹಾರ ನೀಡುವಂತೆ ಸರ್ಕಾರವನ್ನು ಆಗ್ರಹಿಸಿದ್ದಾರೆ.

ಹೊಳೆನರಸೀಪುರ ತಾಲ್ಲೂಕಿನ ಜಿ.ಅಂಕನಹಳ್ಳಿ ಗ್ರಾಮದಲ್ಲಿ ಬಿರುಗಾಳಿಯ ತೀವ್ರತೆಗೆ ವಿದ್ಯುತ್ ಕಂಬಗಳು ಹಾಗು ಮರಗಳು ರಸ್ತೆಗೆ ಉರುಳಿ ಬಿದ್ದ ಪರಿಣಾಮ ಸಂಚಾರಕ್ಕೆ ತೀವ್ರ ಅಡಚಣೆ ಉಂಟಾಯಿತು. ಅದೃಷ್ಟವಶಾತ್ ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ.

ವಿದ್ಯುತ್ ಕಂಬಗಳು ಮುರಿದು ಬಿದ್ದ ಹಿನ್ನಲೆ ಗ್ರಾಮದಲ್ಲಿ ವಿದ್ಯುತ್ ಸಂಪರ್ಕ ಕಡಿತಗೊಂಡಿದ್ದು, ಸ್ಥಳೀಯರು ಸಂಕಷ್ಟ ಅನುಭವಿಸಿದರು. ರಸ್ತೆ ಮೇಲೆ ಬಿದ್ದ ಮರಗಳನ್ನು



ಗ್ರಾಮ ಪಂಚಾಯಿತಿ ಸಿಬ್ಬಂದಿ ತೆರವುಗೊಳಿಸಿ ಸಂಚಾರವನ್ನು ಪುನಃ ಆರಂಭಿಸಿದರು.

ಆಲೂರು ತಾಲ್ಲೂಕಿನಲ್ಲಿ ಸುರಿದ ಭಾರೀ ಬಿರುಗಾಳಿ ಮಳೆಗೆ ಸಿಲುಕಿ ಹಲವು ಮರಗಳು ವಿದ್ಯುತ್ ತಂತಿ ಮತ್ತು ಕಂಬಗಳ ಮೇಲೆ ಬಿದ್ದು ವಿದ್ಯುತ್ ವ್ಯತ್ಯಯ ಉಂಟಾಯಿತು.

» ನಾಲ್ಕನೇ ಪುಟದಲ್ಲಿ

> ಜಗತ್ತಿನಲ್ಲಿ ಭಾರತೀಯ ಸಂಸ್ಕೃತಿಗೆ ಮಾರುಹೋಗದ ದೇಶಗಳೇ ಕಾಣ ಸಿಗುವುದು ಅಪರೂಪ. ಇಂತಹದ್ದೊಂದು ನಡೆಗೆ ಹಾದಿ ತೋರಿಸಿಕೊಟ್ಟವರು ನಮ್ಮ ಹಿರಿಯರು, ಪೂರ್ವಜರು, ಗತಿಸಿಹೋದ ಹಲವಾರು ತಲೆಮಾರುಗಳೆಂದರೂ ತಪ್ಪಾಗಲಾರದು. ಆ ಕಾರಣಕ್ಕಾಗಿ ಭಾರತೀಯ ಕೌಟುಂಬಿಕ ಪದ್ಧತಿ, ಸಂಬಂಧಗಳು, ಆಚಾರ ವಿಚಾರ, ಸಂಪ್ರದಾಯಗಳು ಇಂದಿಗೂ ಜೀವಂತವಾಗಿ ಉಳಿದಿದೆಯೆಂದರೆ ಅತಿಶಯೋಕ್ತಿ ಅಲ್ಲ.

# ಹಳಿ ತಪ್ಪುತ್ತಿದೆ ಭಾರತೀಯ ಕುಟುಂಬ ವ್ಯವಸ್ಥೆ



ವಾಸ್ತವತೆ ನಮ್ಮ ಹಿರಿಯರು ಹಾಕಿ ಕೊಟ್ಟ ಸಂಪ್ರದಾಯ, ಮಾನವೀಯ ಸಂಬಂಧ ಹಾಗೂ ಸಂಬಂಧಗಳ ಭದ್ರ ಬುನಾದಿ ಎನ್ನುವುದು ಒಂದೆಯಲ್ಲ ಅದು ತದ್ವಿರುದ್ಧ ಹಾದಿಯಲ್ಲಿ ಸಾಗುತ್ತಿರುವುದು ಭವಿಷ್ಯದ ಸಂಬಂಧ, ಕೌಟುಂಬಿಕ ಜೀವನ, ಬದುಕುವ ಪದ್ಧತಿ ಎಲ್ಲವೂ ಪಾಶ್ಚಾತ್ಯ ಶೈಲಿ, ವ್ಯಾಪಾರ, ವ್ಯವಹಾರಿಕ ದಿಕ್ಕಿನಲ್ಲಿ ಸಾಗಿ ಮನುಷ್ಯ ಸಂಬಂಧ ಗಳೆಂಬುವುದು ನಗಣ್ಯ ಹಾಗೂ ಅರ್ಥ ಕಳೆದುಕೊಳ್ಳುವತ್ತ ಸಾಗುತ್ತಿದೆ.

ಜಗತ್ತಿನಲ್ಲಿ ಭಾರತೀಯ ಕುಟುಂಬ ವ್ಯವಸ್ಥೆ ಹಾಗೂ ಸಂಸ್ಕೃತಿಗೆ ವಿಶೇಷ ಸ್ಥಾನಮಾನಗಳಿವೆ. ಭಾರತದ ತಳಹದಿಯೇ ಕುಟುಂಬ ವ್ಯವಸ್ಥೆ. ಭಾರತೀಯ ಕೌಟುಂಬ ವ್ಯವಸ್ಥೆಯಲ್ಲಿ ಭಾವನಾತ್ಮಕ ಸಂಬಂಧ, ಸಂಸ್ಕಾರದ ಹಾದಿ, ವಿಶೇಷವಾಗಿ ಮಾನವೀಯ ಗುಣಗಳು ಅಡಕವಾಗಿವೆ. ಬಹುಮುಖ್ಯವಾಗಿ ಸ್ತ್ರೀಯರನ್ನು, ಮಾತೆಯರನ್ನು ಪೂಜನೀಯ ಭಾವದಲ್ಲಿ ಕಂಡ ದೇಶ ಭಾರತ.

ಜಗತ್ತಿನಲ್ಲಿ ಭಾರತೀಯ ಸಂಸ್ಕೃತಿಗೆ ಮಾರುಹೋಗದ ದೇಶಗಳೇ ಕಾಣ ಸಿಗುವುದು ಅಪರೂಪ. ಇಂತಹದ್ದೊಂದು ನಡೆಗೆ ಹಾದಿ ತೋರಿಸಿಕೊಟ್ಟವರು ನಮ್ಮ ಹಿರಿಯರು, ಪೂರ್ವಜರು, ಗತಿಸಿಹೋದ ಹಲವಾರು ತಲೆಮಾರುಗಳೆಂದರೂ ತಪ್ಪಾಗಲಾರದು. ಆ ಕಾರಣಕ್ಕಾಗಿ ಭಾರತೀಯ ಕೌಟುಂಬಿಕ ಪದ್ಧತಿ, ಸಂಬಂಧಗಳು, ಆಚಾರ ವಿಚಾರ, ಸಂಪ್ರದಾಯಗಳು ಇಂದಿಗೂ ಜೀವಂತವಾಗಿ ಉಳಿದಿದೆಯೆಂದರೆ ಅತಿಶಯೋಕ್ತಿ ಅಲ್ಲ.

ವರ್ಷಗಳು ಉರುಳಿದಂತೆ ನಮ್ಮ ಹಿರಿಯರು ಹಾಕಿ ಕೊಟ್ಟ ಸಂಪ್ರದಾಯ, ಮಾನವೀಯ ಸಂಬಂಧ ಹಾಗೂ ಸಂಬಂಧಗಳ ಭದ್ರ ಬುನಾದಿ ಎಂಬುವುದೊಂದಿದೆಯಲ್ಲ ಅದು ತದ್ವಿರುದ್ಧ ಹಾದಿಯಲ್ಲಿ ಸಾಗುತ್ತಿರುವುದು ಭವಿಷ್ಯದ ಸಂಬಂಧ, ಕೌಟುಂಬಿಕ ಜೀವನ, ಬದುಕುವ ಪದ್ಧತಿ ಎಲ್ಲವೂ ಪಾಶ್ಚಾತ್ಯ ಶೈಲಿ, ವ್ಯಾಪಾರ, ವ್ಯವಹಾರಿಕ ದಿಕ್ಕಿನಲ್ಲಿ ಸಾಗಿ ಮನುಷ್ಯ ಸಂಬಂಧಗಳೆಂಬುವುದು ನಗಣ್ಯ ಹಾಗೂ ಅರ್ಥ ಕಳೆದುಕೊಳ್ಳುವತ್ತ ಸಾಗುತ್ತಿದೆ.

ಒಂದು ಮಗು ಜನ್ಮ ತಾಳಿ ಭೂಮಿಗೆ ಕಾಲಿಟ್ಟ ದಿನದಿಂದ ಆಚರಿಸಲ್ಪಡುವ ಮಗುವಿನ ನಾಮಕರಣ, ತೊಟ್ಟಿಲು ಹಾಕುವ ಪದ್ಧತಿ ಆಚರಣೆಯಿಂದ ಹಿಡಿದು ಮದುವೆ, ವಯೋ ಸಹಜ ಸಾವಿನ ಕಾರ್ಯಕ್ರಮದವರೆಗಿನ ಕಟ್ಟುಪಾಡುಗಳು, ಸಂಪ್ರದಾಯಗಳು ಈ ಹಿಂದೆ ಹೇಗಿತ್ತು? ಕಾಲಕಳೆದಂತೆ ಹೇಗೆಲ್ಲ ಮಾರ್ಪಾಡುಗಳಾಗಿವೆ? ಮನೆ ಮಂದಿಯ ಸಂಬಂಧಗಳು, ವೈವಾಹಿಕ ಸಂಬಂಧಗಳು, ಅವಿಭಕ್ತ ಕುಟುಂಬ, ಆಚಾರ ಪದ್ಧತಿ, ಅನುಶಾಸನಗಳು ಯಾವ ಪ್ರಮಾಣದಲ್ಲಿ ಅಧಃಪತನಕ್ಕಿಳಿದಿದೆ ಎಂಬುವುದನ್ನು ಕಲ್ಪಿಸಲು ಅಸಾಧ್ಯ.

ಹಿಂದೆಲ್ಲಾ ಒಂದು ಮನೆಯಲ್ಲಿ ಅವಿಭಕ್ತ ಕುಟುಂಬ ಅಂದರೆ 20 ರಿಂದ 25 ಮಂದಿ ವಾಸಿಸುವ ಕೂಡಿ ಬಾಳುವ ಮನಸ್ಸುಗಳನ್ನು ಕಾಣುತ್ತಿದ್ದೆವು. ಒಟ್ಟಾಗಿ ಮನೆಯಲ್ಲಿ ಭಜನೆ ಹಾಡುವ, ಒಟ್ಟಾಗಿ ಅಂಗಳದಲ್ಲಿ ಆಟವಾಡುವ, ಮನೆಮಂದಿಯೆಲ್ಲ ಒಟ್ಟಾಗಿ ಕುಳಿತು ಉಣ್ಣುವಲ್ಲಿಯವರೆಗೆ ಸಂಸಾರದ ಹೊಂದಾಣಿಕೆಗಳಿದ್ದವು.

ಪ್ರಸ್ತುತ ದಿನಗಳಲ್ಲಿ ವಧು-ವರ ಅನ್ವೇಷಣೆಯನ್ನೇ ಗಣನೆಗೆ ತೆಗೆದುಕೊಳ್ಳುವುದಾದರೆ 30, 35, 40 ವರ್ಷಗಳು ದಾಟಿದ ಅದೆಷ್ಟೋ ಯುವಕರಿಗೆ ಹೆಣ್ಣು ಸಿಗದಂತಹ ವಾತಾವರಣ ಎಲ್ಲ ಸಮುದಾಯದಲ್ಲಿ ಕಾಣಬಹುದಾಗಿದೆ. ಸರಕಾರಿ ಉದ್ಯೋಗ, ವಿದೇಶದಲ್ಲಿ ಉದ್ಯೋಗ, ಲಕ್ಷ ಲಕ್ಷ ಸಂಪಾದನೆ, ಕೃಷಿ ಚಟುವಟಿಕೆ, ರೈತ ಕುಟುಂಬಗಳ ನಿರಾಕರಣೆ, ಮನೆಯಲ್ಲಿ ಸಾಮಾಜಿಕ ಪಿಡುಗಿನ ಹಾವಳಿಗೆ ಹೆಣ್ಣು ಮಕ್ಕಳು ಆತ್ಮಹತ್ಯೆ ಮಾಡಿಕೊಳ್ಳುವ ಪ್ರಕರಣಗಳು, ವರದಕ್ಷಿಣೆಗಾಗಿ ಹೆಣ್ಣು ಮಕ್ಕಳನ್ನು ಪೀಡಿಸುವ ಗಂಡ, ಮಾವ, ಅತ್ತೆಯಂದಿರು, ಪೆಟ್ರೋಲ್, ಸೀಮೆ ಎಣ್ಣೆ ಸುರಿಯುವ ಹಂತದವರೆಗೂ ತಲುಪುತ್ತಿತ್ತು ಪರಿಸ್ಥಿತಿ. ವೈವಾಹಿಕ ಸಂಬಂಧಗಳ ಅನ್ವೇಷಣೆಯಲ್ಲೂ ಮಾನವೀಯ ಗುಣಗಳು ನಶಿಸಿ ಹೋಗುತ್ತಿರುವ ಘಟನೆಗಳು ಸಾಕಷ್ಟಿವೆ. ವಿವಾಹ ಸಂಬಂಧಗಳು ಎರಡು ಕಡೆಗೆ ಒಪ್ಪಿಗೆಯಾಗಿ, ನಿಶ್ಚಿತಾರ್ಥ ಎಲ್ಲವೂ ನಡೆದು ಮದುವೆ ಮುಂಚಿನ ದಿನ ಪ್ರಿಯಕರನೊಂದಿಗೆ ಪರಾರಿಯಾಗುವ ಯುವಕ, ಯುವತಿಯರು, ಇನ್ಯಾವುದೋ ವಿಚಾರಗಳಿಗೆ ಹಸೆಮಣೆಯಿಂದ ವಧು ಎದ್ದು ಹೋಗುವ ವಿದ್ಯಮಾನಗಳು, ಒಂದೆಡೆಯಾದರೆ, ದುಬಾರಿ ಮೊಬೈಲ್ ಕೊಡಿಸಿಲ್ಲ, ಒಡವೆ ಕೊಡಿಸಿಲ್ಲ, ಇನ್ನಿತರ ಕ್ಷುಲ್ಲಕ ಕಾರಣಗಳಿಗಾಗಿ ವಿವಾಹ ಸಂಬಂಧಗಳನ್ನೇ ಕಡಿದುಕೊಳ್ಳುವ ಹಲವಾರು ವಿದ್ಯಮಾನಗಳು ಮದುವೆ ಎಂಬ ಸಂಬಂಧದ ಗಂಭೀರತೆಯನ್ನು ಅಣಕಿಸುವಂತಿದೆ. ಇಂತಹ ದುಸ್ಸಾಹಸಕ್ಕೆ ಇಳಿಯುವ, ಐಷಾರಾಮಿ, ಅಮಾನವೀಯ ಬೇಡಿಕೆಗಳಿಗೆ ಸಂಬಂಧವನ್ನು ಅಡವಿಡುವ ಹಿರಿಯ ಜೀವಗಳು ಅಂದರೆ ಹೆತ್ತ ತಂದೆ ತಾಯಂದಿರು ಇರಬಾರದು.

ಇದ್ದರೆ ಆ ಹಿರಿ ಜೀವಗಳಿಗೆ ನಿರುಪಯುಕ್ತ ವಸ್ತುಗಳೆಂಬ ಹಣೆಪಟ್ಟಿ, ವಯಸ್ಸಿನ ಅಂತರ 2 ಅಥವಾ 3 ವರ್ಷಗಳ ಬೇಡಿಕೆ, ಹಿಂದೆಲ್ಲ ಅಪ್ಪ-ಅಮ್ಮ ಅಥವಾ ಹಿರಿಯರು ಒಂದು ಹುಡುಗಿಗೆ ಹುಡುಗನನ್ನು ಗೊತ್ತುಮಾಡಿದರೆ ಅಥವಾ ಹುಡುಗನಿಗೆ ಹುಡುಗಿ ನೋಡಿ ಬಿಟ್ಟರೆ ಅಲ್ಲಿಗೆ ಎಲ್ಲವೂ ಫೈನಲ್ ಆಗಿ ಅಂತಿಮ ಮುದ್ರೆ ಬೀಳುತ್ತಿತ್ತು.

ಪ್ರಸ್ತುತ ದಿನಗಳಲ್ಲಿ ಮಕ್ಕಳ ನಿರ್ಧಾರಗಳೇ ಪ್ರಧಾನವಾಗಿ ಕೊನೆಗೆ ಪೋಷಕರು ಮಂಗಳ ಕಾರ್ಯಕ್ಕೆ ಇಳಿಯುವ ಮೂಲಕ ತದ್ವಿರುದ್ಧ ಸ್ಥಿತಿಯಲ್ಲಿದೆ. ನಾವು ದಿನಪತ್ರಿಕೆಗಳ ಪುಟಗಳನ್ನು ತಿರುವಿದಾಗ ಕಾಣಸಿಗುವ ಆಘಾತಕಾರಿ ಅಂಶಗಳ ಪೈಕಿ ಹೆಣ್ಣು ಸಿಗದೆ ಯುವಕ ಆತ್ಮಹತ್ಯೆ, ಮದುವೆಯಾಗದ ಕೊರಗು ಯುವಕ ವಿಷ ಸೇವಿಸಿ ಆತ್ಮಹತ್ಯೆಯಂತಹ ಪ್ರಕರಣಗಳನ್ನು ಕಾಣುತ್ತೇವೆ.

ಎಲ್ಲಿಯವರೆಗೆ ಪರಿಸ್ಥಿತಿ ತಲುಪಿದೆಯೆಂದರೆ ಇತ್ತೀಚೆಗೆ ಮುಖ್ಯಮಂತ್ರಿಗಳ ಜನತಾ ದರ್ಶನ ಕಾರ್ಯಕ್ರಮವೊಂದರಲ್ಲಿ ಯುವಕನೊಬ್ಬ ಮದುವೆಯಾಗಿಲ್ಲ ಹೆಣ್ಣು ಸಿಗುತ್ತಾ ಇಲ್ಲ ಹುಡುಗಿ ಹುಡುಕಿ ಕೊಡಿ ಸರ್ ಎಂದು ಯುವಕನೊಬ್ಬ ಖುದ್ದು ಮುಖ್ಯಮಂತ್ರಿಗಳಿಗೇ ಅಹವಾಲು ಸಲ್ಲಿಸಿದ. ಹಿಂದೆಲ್ಲಾ ವರದಕ್ಷಿಣೆಯಂತಹ ಸಾಮಾಜಿಕ ಪಿಡುಗಿನ ಹಾವಳಿಗೆ ಹೆಣ್ಣು ಮಕ್ಕಳು ಆತ್ಮಹತ್ಯೆ ಮಾಡಿಕೊಳ್ಳುವ ಪ್ರಕರಣಗಳು, ವರದಕ್ಷಿಣೆಗಾಗಿ ಹೆಣ್ಣು ಮಕ್ಕಳನ್ನು ಪೀಡಿಸುವ ಗಂಡ, ಮಾವ, ಅತ್ತೆಯಂದಿರು, ಪೆಟ್ರೋಲ್, ಸೀಮೆಎಣ್ಣೆ ಸುರಿಯುವ ಹಂತದವರೆಗೂ ತಲುಪುತ್ತಿತ್ತು ಪರಿಸ್ಥಿತಿ.

ವೈವಾಹಿಕ ಸಂಬಂಧಗಳ ಅನ್ವೇಷಣೆಯಲ್ಲೂ ಮಾನವೀಯ ಗುಣಗಳು ನಶಿಸಿ ಹೋಗುತ್ತಿರುವ ಘಟನೆಗಳು ಸಾಕಷ್ಟಿವೆ. ವಿವಾಹ ಸಂಬಂಧಗಳು ಎರಡು ಕಡೆಗೆ ಒಪ್ಪಿಗೆಯಾಗಿ, ನಿಶ್ಚಿತಾರ್ಥ ಎಲ್ಲವೂ ನಡೆದು ಮದುವೆ ಮುಂಚಿನ ದಿನ ಪ್ರಿಯಕರನೊಂದಿಗೆ ಪರಾರಿಯಾಗುವ ಯುವಕ, ಯುವತಿಯರು, ಇನ್ಯಾವುದೋ ವಿಚಾರಗಳಿಗೆ ಹಸೆಮಣೆಯಿಂದ ವಧು ಎದ್ದು ಹೋಗುವ ವಿದ್ಯಮಾನಗಳು, ಒಂದೆಡೆಯಾದರೆ, ದುಬಾರಿ ಮೊಬೈಲ್ ಕೊಡಿಸಿಲ್ಲ, ಒಡವೆ ಕೊಡಿಸಿಲ್ಲ, ಇನ್ನಿತರ ಕ್ಷುಲ್ಲಕ ಕಾರಣಗಳಿಗಾಗಿ ವಿವಾಹ ಸಂಬಂಧಗಳನ್ನೇ ಕಡಿದು ಕೊಳ್ಳುವ ಹಲವಾರು ವಿದ್ಯಮಾನಗಳು ಮದುವೆ ಎಂಬ ಸಂಬಂಧದ ಗಂಭೀರತೆಯನ್ನು ಅಣಕಿಸುವಂತಿದೆ.

ಇಂತಹ ದುಸ್ಸಾಹಸಕ್ಕೆ ಇಳಿಯುವ, ಐಷಾರಾಮಿ, ಅಮಾನವೀಯ ಬೇಡಿಕೆಗಳಿಗೆ ಸಂಬಂಧ ಅಡವಿಡುವ ಯುವ ಸಮುದಾಯಗಳು ಒಂದು ಬಾರಿ ತಮ್ಮ ಹೆತ್ತ ತಂದೆ-ತಾಯಂದಿರು,







ಅಜ್ಜ-ಅಜ್ಜಿಯಂದಿರು ಎಷ್ಟು ಸಂಕಷ್ಟದ ಸಮಯದಲ್ಲಿ ಎಲ್ಲ ನೋವುಗಳನ್ನು ನುಂಗಿ ದಾಂಪತ್ಯ ಎಂಬ ಮೌಲ್ಯಯುತ ಬದುಕಿಗೆ ತ್ಯಾಗಮಯಿಗಳಾಗಿ ನ್ಯಾಯ ಒದಗಿಸಿ ಕೊಟ್ಟಿರುವುದನ್ನು ಯೋಚಿಸಬೇಕಿದೆ.

ಇನ್ನು ಸಮಾಜದಲ್ಲಿ ಅತಿ ವೇಗವಾಗಿ ಹರಡುತ್ತಿರುವ ಮತ್ತೊಂದು ಪಿಡುಗು ವಿಚ್ಛೇದನ ಪ್ರಕರಣಗಳು. ಇಂದು ನ್ಯಾಯಾಲಯದ ಮೆಟ್ಟಿಲಲ್ಲಿ ಅಪರಾಧ ಪ್ರಕರಣಗಳಿಂತ ಹೆಚ್ಚಿನ ಪ್ರಮಾಣದಲ್ಲಿ ದಾಖಲಾಗುತ್ತಿರುವುದು ದಂಪತಿಗಳ ಕಲಹ, ದಾಂಪತ್ಯ ವಿರಸ, ವಿಚ್ಛೇದನ ಕೋರಿ ಬರುವ ಮನವಿಗಳು. ಇತ್ತೀಚೆಗೆ ಸಿಕ್ಕ ನ್ಯಾಯವಾದಿ ಮಿತ್ರರೊಬ್ಬರ ಮಾತಿನಂತೆ ಈ ವಿಚ್ಛೇದನ ಪ್ರಕರಣಗಳು ಯಾವುದೇ ಬಹುದೊಡ್ಡ ಸವಾಲು, ಬಿಡಿಸಲಾಗದ, ಕಗ್ಗಂಟಾದ ಸಮಸ್ಯೆಗಳಿಂದ ನಡೆಯುತ್ತಿರುವುದಲ್ಲ.

ಬದಲಾಗಿ ಕ್ಷುಲ್ಲಕ ಕಾರಣಗಳಿಗಾಗಿಯೇ ದಾಂಪತ್ಯ ಹೊಂದಾಣಿಕೆಯಾಗದೆ ನಡೆಯುತ್ತಿರುವ ಘಟನೆಗಳು. ಇಂತಹ ಪ್ರಕರಣಗಳಲ್ಲಿ ವಿಚಾರಣೆಯ ಮೇಲೆ ಖುದ್ದು ನ್ಯಾಯಾಧೀಶರೇ ಗರಂ ಆಗಿ ಗದರಿಸಿದ ನಿದರ್ಶನಗಳಿವೆ. ಯಾಕೆ ಸಣ್ಣ-ಪುಟ್ಟ ಸಂಗತಿಗಳು, ಸವಾಲುಗಳನ್ನು ಎದುರಿಸುವಲ್ಲಿ ಯುವ ಸಮುದಾಯ ಎಡವಿ ಬೀಳುತ್ತಿವೆ? ಇಂದಿನ ಶಿಕ್ಷಣದ ಮಟ್ಟವೇ? ಸಾಮಾಜಿಕ ಮಾಧ್ಯಮ, ಜಾಲತಾಣಗಳ ಪ್ರಭಾವವೇ? ಕಾನೂನಿನಲ್ಲಿ ಮಿತಿ ಮೀರಿದ ನಿಯಮಗಳ ಸಡಿಲಿಕೆಯೇ? ಪಾಶ್ಚಾತ್ಯ ಪ್ರಭಾವ, ಪೋಷಕರು ಬೆಳೆಸಿದ ರೀತಿಯೇ? ಎಂಬುದು ಕೂಡ ಚರ್ಚೆಗೆ ಹಚ್ಚುವ ವಿಚಾರಗಳೇ.

ಇನ್ನು ಕೌಟುಂಬಿಕ ಮಟ್ಟದಲ್ಲಿ ಮಗುವಿನ ನಾಮಕರಣ, ಮದುವೆ, ಮದರಂಗಿ ಶಾಸ, ಸಂಗೀತ್, ಸೀಮಂತ, ಒಬ್ಬ ವ್ಯಕ್ತಿ ಸತ್ತಾಗ ನಡೆಸುವ ವಿಧಿ ವಿಧಾನಗಳು ನಂತರದ ಆಚರಣೆಗಳು ಇರಬಹುದು, ಕುಟುಂಬದ ದೇವಾರಾಧನೆ, ದೈವಾ ರಾಧನೆ, ನಾಗಾರಾಧನೆ, ಗೃಹಪ್ರವೇಶ ಅಥವಾ ಇನ್ಯಾವುದೇ ಕಾರ್ಯಕ್ರಮ ವಿಚಾರಕ್ಕೆ ಬಂದಾಗ ಕಟ್ಟುಪಾಡುಗಳು, ಸಂಪ್ರ ದಾಯ, ಆಚರಣೆಗಳನ್ನು ಮೀರಿ ಪ್ರತಿಷ್ಠೆಯ ಕಣವಾಗಿ, ದುಂದುವೆಚ್ಚಕ್ಕೆ ಹೊಸ ಹೊಸ ಸಂಪ್ರದಾಯಗಳಿಗೆ ನಾಂದಿ ಹಾಡುವ ಪದ್ಧತಿಗಳು ಜೋರಾಗಿ ನಡೆಯುತ್ತಿವೆ.

ತಾನು ಕೂಡಿಟ್ಟ ಸಂಪತ್ತು, ಐಶ್ವರ್ಯವನ್ನು ನಾಲ್ಕು ಮಂದಿಗೆ ಪ್ರದರ್ಶಿಸಬೇಕು, ಪ್ರಚಾರ ಬೇಕು ಎಂಬಲ್ಲಿಗೆ ನಡೆಸಿದ ಕಾರ್ಯಕ್ರಮ ಅರ್ಥ ಕಳೆದುಕೊಂಡು ಸಮಾಜದ ದಿಕ್ಕು ತಪ್ಪಲು ಅಮಾನವೀಯ ನಡೆಗಳಿಗೆ ಪ್ರೇರಣೆ ನೀಡಿದಂತಾಗುತ್ತದೆ.

ಈಗಿನ ಆಧುನಿಕ ಜೀವನದ ಶೈಲಿಗೆ ಬಡಮಂದಿ ತಮ್ಮ ಮಕ್ಕಳಿಗೆ ಶುಭ ಕಾರ್ಯವನ್ನು ನಡೆಸಬೇಕಾದರೆ, ಒಡವೆ, ಬಟ್ಟೆಬರೆಗಳನ್ನು ಕೂಡಿಡುವಷ್ಟರ ಮಟ್ಟಿಗೆ ಹೈರಾಣಾಗಿ ಬಿಡುತ್ತಾರೆ. ಈಗಿನ ಕೆಲ ಮದುವೆ, ಗೃಹಪ್ರವೇಶ, ಸೀಮಂತ, ನಿಶ್ಚಿತಾರ್ಥದಂತಹ ಕಾರ್ಯಕ್ರಮದ ಖರ್ಚು ವೆಚ್ಚಗಳನ್ನು ತುಲನೆ ಮಾಡಿದಾಗ ಈ ಹಿಂದಿನ ಕಾಲದಲ್ಲಿ 5-6 ಮಂದಿಗೆ ಮದುವೆ ನಡೆಸುವಷ್ಟರ ಮಟ್ಟಿಗೆ ವ್ಯಯಿಸಲಾಗುತ್ತಿದೆ.

ಉಳ್ಳವರು ಎಲ್ಲವನ್ನೂ ಮಾಡುವರು ಆದರೆ ನಮ್ಮ ಸಮಾಜದಲ್ಲಿ ಒಂದು ಮಧ್ಯಮ ವರ್ಗ, ಬಡ ವರ್ಗ ಎಂಬುದು ಇದೆಯಲ್ಲ ಈ ವರ್ಗ ಇದರ ಪೆಟ್ಟು ವ್ಯಾಪಕ ಪ್ರಮಾಣದಲ್ಲಿ ತಿನ್ನುತ್ತಿವೆ. ಇನ್ನು ಕೌಟುಂಬಿಕ, ದಾಂಪತ್ಯ ಜೀವನಗಳಿರಬಹುದು ಇದು ಯಾವುದೇ ಶೋಕಿ, ಪ್ರಯೋಗ, ತೋರ್ಪಡಿಕೆಯ ವಿಚಾರಗಳಾಗದೆ ಮೌಲ್ಯವನ್ನು ಉಳಿಸಿಕೊಂಡು ಸಾಗಬೇಕು. ಗುರು ಹಿರಿಯರು ಬಂಧು ಬಳಗವನ್ನು ಒಟ್ಟಾಗಿ ಕರೆದೊಯ್ಯುವ ವ್ಯವಸ್ಥೆಗಳಾಗಬೇಕು.

ಸವಾಲು, ಕ್ಷುಲ್ಲಕ ಕಾರಣಗಳ ಸೇಡು, ಹಠ, ಜಿದ್ದು, ಸ್ವಾರ್ಥ ಎಂಬುವುದು ಸಂಸಾರದಲ್ಲಿ ಸೋಕಿದಾಗ ಅಲ್ಲಿ ಬಿರುಕು, ವ್ಯತ್ಯಯಗಳಾಗುವುದನ್ನು ಕಾಣುತ್ತೇವೆ. ಎಷ್ಟೇ ಸಂಪತ್ತು, ಐಶ್ವರ್ಯಗಳಿದ್ದರೂ ಒಬ್ಬ ಮನುಷ್ಯನ ಜೀವಿತಾವಧಿಯಲ್ಲಿ ಮಾತ್ರ ಅದು ಪ್ರಯೋಜನಕ್ಕೆ ಬರುವುದೇ ವಿನಃ ಸತ್ತ ಮೇಲೆ ಎಲ್ಲವೂ ನಗಣ್ಯ. ಆ ಕಾರಣಕ್ಕೆ ಮನುಷ್ಯನಿಗೆ ಬಹುಮುಖ್ಯವಾಗಿ ಬೇಕಿರುವುದು ಆರೋಗ್ಯ. ಮತ್ತೊಂದು ಕೌಟುಂಬಿಕ ವ್ಯವಸ್ಥೆಯಲ್ಲಿ ನೆಮ್ಮದಿ.

ಇದರಲ್ಲಿ ಸಮತೋಲನ ತಪ್ಪಿದಾಗ ಎಷ್ಟೇ ಕೂಡಿಟ್ಟರೂ ಮಾನಸಿಕ ನೆಮ್ಮದಿಯನ್ನು ಕಳೆದುಕೊಂಡು ಪರಿತಪಿಸುವ ಮಂದಿಯನ್ನು ಕಾಣುತ್ತೇವೆ. ವರ್ಷಗಳು ಉರುಳಿದಂತೆ ಒಂದಷ್ಟು ಪ್ರಭಾವಗಳಿಗೆ ಒಳಗಾಗಿ, ಒತ್ತಡದ ಬದುಕಿಗೆ ಮನುಷ್ಯನ ಜೀವನ ಸಾಗುತ್ತಿರುವುದು ಒಂದೆಡೆ ಭಾವನೆ, ಮಾನವೀಯ ಸಂಬಂಧಗಳನ್ನು ಮೀರಿದ ವರ್ತನೆಗಳು ಮತ್ತೊಂದೆಡೆ. ಕೌಟುಂಬಿಕ ವ್ಯವಸ್ಥೆಗಳ ಅಡಿಪಾಯ ಭದ್ರಗೊಂಡಾಗ ದೇಶದ ಭವಿಷ್ಯವು ಉಜ್ವಲವಾಗಲಿದೆ.

ಭಾರತದ ಕುಟುಂಬ ವ್ಯವಸ್ಥೆಗಳು ಕೂಡಾ ವಾಣಿಜ್ಯಾತ್ಮಕ ದಿಕ್ಕಿನಲ್ಲಿ ಸಾಗದೇ ಹಿರಿಯರು ಹಾಕಿ ಕೊಟ್ಟ ಮೌಲ್ಯವನ್ನು ಉಳಿಸಿಕೊಂಡು ಬೆಳೆಸಿಕೊಂಡು ಮುಂದೆ ಸಾಗಬೇಕಾದ ಹೊಣೆಗಾರಿಕೆ ಯುವಪೀಳಿಗೆಯ ಮೇಲಿದೆ.

**- ಆದರ್ಶ್ ಶೆಟ್ಟಿ,** ಉಪ್ಪಿನಂಗಡಿ

---

# ನಮ್ಮ ಹೆದ್ದಾರಿಗಳೆಂದರೆ ದರೋಡೆಗೆ ರಹದಾರಿಯೇ?

> » ಅಭಿವೃದ್ಧಿ ಎಂದರೆ ಕೇವಲ ಅಗಲವಾದ ರಸ್ತೆಗಳಲ್ಲ, ಆ ರಸ್ತೆಗಳಲ್ಲಿ ಸಂಚರಿಸುವ ಅತ್ಯಂತ ಕಟ್ಟಕಡೆಯ ಮನುಷ್ಯನ ಹಸಿವು ಮತ್ತು ಹಕ್ಕುಗಳಿಗೆ ಗೌರವ ಸಿಗುವುದೇ ನಿಜವಾದ ಅಭಿವೃದ್ಧಿ. ಲಾಭ ಬಡುಕತನದ ಹೋಟೆಲ್ ಮಾಲೀಕರು ಮತ್ತು ಕೇವಲ ಆದಾಯದ ಕಡೆಗೆ ಗಮನ ಹರಿಸುವ ಸರಕಾರಗಳು ಎಚ್ಚೆತ್ತುಕೊಳ್ಳದಿದ್ದರೆ, ನಮ್ಮ ಹೆದ್ದಾರಿಗಳು ಕೇವಲ ದರೋಡೆಯ ಮಾರ್ಗಗಳಾಗಿ ಉಳಿಯಲಿವೆ.

ಲೋಕಮತ ಇತ್ತೀಚೆಗೆ ಕನ್ನಡಿಗ ರಾಘವೇಂದ್ರ ರಾವ್ ಅವರ ರಾಮೇಶ್ವರಂ ಕೆಫೆಗೆ ಹೋದವರು ಅಲ್ಲಿಯ ತಿಂಡಿ, ತಿನಿಸಿನ ವರ್ಣನೆ ಬಿಟ್ಟು ಪಾವತಿಸಿದ ಬಿಲ್‌ಗಳನ್ನು ಸಾಮಾಜಿಕ ಜಾಲ ತಾಣಗಳಲ್ಲಿ ಹಂಚಿಕೊಳ್ಳುತ್ತಿದ್ದಾರೆ. ಮುಂಬಯಿನ ಹೊಸ ಶಾಖೆಯಲ್ಲಿ ಇತ್ತೀಚೆಗೆ ಆತಿಥ್ಯ ಸ್ವೀಕರಿಸಿದ ಗ್ರಾಹಕರೊಬ್ಬರು ಮಸಾಲಾ ದೋಸೆಗೆ 376 ರು. ವಡಾ ಸಾಂಬಾರ್‌ಗೆ 240 ರು. ಟೀಗೆ 196 ರು. ಪಾವತಿಸಿದ್ದಾಗಿ ಬಿಲ್ ಹಂಚಿಕೊಂಡಿದ್ದರು. ಬೆಂಗಳೂರಿನ ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿರುವ ಕೆಫೆಯಲ್ಲಿ ಘೀ ಪೋಡಿ ಇಡ್ಲಿಗೆ ಜಿಎಸ್‌ಟಿ ಸೇರಿ 315 ರು. ಪಾವತಿಸಿದ್ದಾಗಿ ಗ್ರಾಹಕರೊಬ್ಬರು ಹೇಳಿಕೊಂಡಿದ್ದಾರೆ. ಇನ್ನು ರಾಜಧಾನಿಯ ಬೊಮ್ಮ ಸಂದ್ರದಲ್ಲಿ 90 ಸಾವಿರ ಚದರ ಅಡಿಯಲ್ಲಿ ತಲೆ ಎತ್ತಿರುವ ಭವ್ಯ ಮಂದಿರ ಕಮ್ ಹೋಟೆಲ್‌ನಲ್ಲಿ ಈ ಬಿಲ್ಲು ಇನ್ನಷ್ಟು ಭಾರವಾಗಿರುವ ವರದಿಗಳಿವೆ. ಇಲ್ಲಿನ ಆತಿಥ್ಯದ ಬಗ್ಗೆಯೂ ನೂರೆಂಟು ಕಮೆಂಟುಗಳು ಜಾಲತಾಣದಲ್ಲಿ ಸಿಗುತ್ತವೆ.

ನಿಮ್ಮ ಕಿಸೆ ಭಾರವಿದ್ದರೆ, ಮನಸ್ಸು ಹಗುರ ಮಾಡಿ ಕೊಳ್ಳಲು ಇಲ್ಲಿಗೆ ಹೋಗಬಹುದು ಅಥವಾ ದೂರದಿಂದ ನೋಡಿ ಖುಷಿ ಪಡಬಹುದು. ಆದರೆ ಬೆಂಗಳೂರಿನಿಂದ ಧರ್ಮಸ್ಥಳ, ಕುಕ್ಕೆ ಸುಬ್ರಮಣ್ಯ, ಚಾಮುಂಡಿ ಬೆಟ್ಟ ಅಥವಾ ಉತ್ತರ ಕರ್ನಾಟಕದ ಯಾವುದೋ ಊರಿಗೆ ಕುಟುಂಬ ಸಮೇತ ಹೊರಟಿರುತ್ತೀರಿ ಎಂದುಕೊಳ್ಳಿ.

ಹೊಟ್ಟೆ ತಾಕಲಾಟ ನಡೆಸುತ್ತಿದ್ದರೂ ಇಲ್ಲಿನ ಹೆದ್ದಾರಿ ಸಮೀಪ ಹೊಸದಾಗಿ ತಲೆ ಎತ್ತಿರುವ ತಲೆ ಎತ್ತಿರುವ ಭವ್ಯ ಹೋಟೆಲ್‌ಗಳ ಒಳಗೆ ಹೋಗಲು ಧೈರ್ಯ ಸಾಕಾಗುವುದಿಲ್ಲ. ಇಬ್ಬರು ಮಕ್ಕಳ ಸಹಿತ ನಾಲ್ವರ ಕುಟುಂಬ ಸಾವಿರ ರು. ಕೈಯಲ್ಲಿ ಹಿಡಿದು ಒಳಗೆ ಹೋದರೆ ಹೊಟ್ಟೆ ತುಂಬಾ ಉಂಡು, ಸಂತೃಪ್ತಿಯಿಂದ ಹೊರ ಬರಲು ಸಾಧ್ಯವಿಲ್ಲ. ಇದೇನೂ ತರಹೇವಾರಿ ಶುಲ್ಕ ಇರುವ ನಾನ್ ವೆಜ್ ಹೋಟೇಲ್‌ಗಳ ಕಥೆಯಲ್ಲ. ಅಪ್ಪಟ ಶಾಖಾಹಾರಿ ಹೋಟೆಲ್‌ಗಳಲ್ಲೂ ಊಟ, ತಿಂಡಿಗಳ ಬೆಲೆ ಗಗನದೆತ್ತರದಲ್ಲಿವೆ.

ಬೆಂಗಳೂರಿನಿಂದ ಮೈಸೂರು ನಡುವಿನ ಎಕ್ಸ್‌ಪ್ರೆಸ್ ರಸ್ತೆ ಇರಲಿ, ಬೆಂಗಳೂರು-ಮಂಗಳೂರು ನಡುವೆ ಅಗಲೀಕರಣ ಕಂಡ ಹೆದ್ದಾರಿಯಾಗಲಿ ರಾಜ್ಯದ ಎಲ್ಲ ಹೆದ್ದಾರಿಗಳಲ್ಲಿ ಇತ್ತೀಚೆಗೆ ಹೊಸ ಹೊಸ ಹೋಟೇಲ್‌ಗಳು ತಲೆ ಎತ್ತಿವೆ. ಈ ಯಾವ ಹೋಟೇಲ್‌ಗಳೂ ಸಣ್ಣ ಪ್ರಮಾಣದಲ್ಲ. ಬಹುತೇಕ ಎಲ್ಲವನ್ನೂ ಸಾವಿರಾರು ಚದರ ಅಡಿಗಳಲ್ಲಿ ಕಟ್ಟಲಾಗಿದೆ.

ಪ್ರತಿಯೊಂದರಲ್ಲೂ ಸಮವಸ್ತ್ರಧಾರಿ ನೌಕರರು, ಸೆಕ್ಯೂರಿಟಿಗಳು, ಕ್ಲೀನಿಂಗ್ ಸಿಬ್ಬಂದಿ ಇರುತ್ತಾರೆ. ತಕ್ಕ ಮಟ್ಟಿಗೆ ಸ್ವಚ್ಛವಿರುವ ಶೌಚಾಲಯಗಳಿರುತ್ತವೆ. ಆದರೆ ಹೊರಗಿನಿಂದ ಅದ್ದೂರಿಯಾಗಿ ಕಂಡಷ್ಟೂ ಈ ಹೋಟೆಲ್‌ಗಳ ಒಳ ಹೊಕ್ಕು ನೋಡಲು ಮಧ್ಯಮ ವರ್ಗದ ಮಂದಿ ಹಿಂದೇಟು ಹಾಕುತ್ತಾರೆ. ಒಂದು ಬಾರಿ ಮೈಸೂರು ಅಥವಾ ಬೆಂಗಳೂರು ನಗರದೊಳಗೆ ಪ್ರವೇಶಿಸಿದರೆ ಈ ಹೋಟೆಲ್‌ಗಳಿಗಿಂತ ಅರ್ಧ ಬೆಲೆಯಲ್ಲಿ ಹಸಿವು ತಣಿಸಿಕೊಳ್ಳಬಹುದೆನ್ನುವುದು ಅವರ ಲೆಕ್ಕಾಚಾರ. ಹೆದ್ದಾರಿಯ ಬಹುತೇಕ ಹೋಟೆಲ್‌ಗಳಲ್ಲಿ ಒಂದು ಕಪ್ ಕಾಫಿ ಇಲ್ಲವೇ ಟೀ ಕುಡಿಯಬೇಕಾದರೂ ಕನಿಷ್ಠ 50 ರು. ಪಾವತಿಸಬೇಕಾಗಿದೆ.

ರಾಜ್ಯದಲ್ಲಿ ಹೆದ್ದಾರಿ ಪಯಣ ಈಗ ಹಿಂದಿಗಿಂತ ಹೆಚ್ಚು ಸುಖಕರವಾಗಿವೆ ಎನ್ನುವುದರಲ್ಲಿ ಎರಡು ಮಾತಿಲ್ಲ. ಕಣ್ಣು ಹಾಯಿಸಿದಷ್ಟು ಉದ್ದಕ್ಕೆ ಚಾಚಿಕೊಂಡಿರುವ ನಯವಾದ ರಸ್ತೆಗಳು, ಫ್ಲೈಓವರ್‌ಗಳು ನಮಗೆ ವಿಕಸಿತ ಭಾರತದ ದರ್ಶನ ಮಾಡಿಸುತ್ತವೆ. ಆದರೆ 20-30 ಕಿ.ಮೀ ಕಿಲೋಮೀಟರ್ ಅಂತರದಲ್ಲಿ ಅಡ್ಡಗಟ್ಟುವ ಟೋಲ್ ಮತ್ತು ಹೋಟೆಲ್‌ಗಳ ಬಿಲ್ ಮಾತ್ರ ಸಾಮಾನ್ಯ ಜನರನ್ನು ಕಂಗೆಡಿಸುತ್ತಿವೆ. ಇಂದು ಹೆದ್ದಾರಿಗಳಲ್ಲಿ ಸಾಗುವುದೆಂದರೆ ಅದು ಬರೀ ಪ್ರಯಾಣವಲ್ಲ, ಬದಲಾಗಿ ಅಧಿಕೃತ ದರೋಡೆಗೆ ನಮ್ಮನ್ನು ನಾವೇ ಒಡ್ಡಿಕೊಳ್ಳುತ್ತಿರುವ ಯಾನ ಎಂದರೆ ತಪ್ಪಿಲ್ಲ.




ಬೆಂಗಳೂರಿನಿಂದ ಮಂಗಳೂರಿಗೆ ಹೋಗಬೇಕಾದರೆ 10ಕ್ಕೂ ಹೆಚ್ಚು ಟೋಲ್‌ಗಳನ್ನು ದಾಟಿ ಸಾಗಬೇಕು. ನಿಮ್ಮ ವಾಹನಕ್ಕೆ ರಾಷ್ಟ್ರೀಯ ಹೆದ್ದಾರಿ ವಾರ್ಷಿಕ ಪಾಸ್ ಇಲ್ಲ ಎಂದಾದರೆ ಟೋಲ್ ಮೊತ್ತವೇ ಸಾವಿರ ರು. ದಾಟುತ್ತದೆ. ವಿಪರ್ಯಾಸವೆಂದರೆ, ಭಾರಿ ಹಣ ಪಾವತಿಸಿದರೂ ಹೆದ್ದಾರಿಗಳಲ್ಲಿ ಕನಿಷ್ಠ ಸೌಲಭ್ಯಗಳಾದ ಗುಣಮಟ್ಟದ ಶೌಚಾಲಯಗಳು ಅಥವಾ ವಿಶ್ರಾಂತಿ ತಾಣಗಳು ಸಿಗುವುದು ದುರ್ಲಭ. ಟೋಲ್ ವಸೂಲಿ ಮಾಡುವ ಕಂಪನಿಗಳಿಗೆ ರಸ್ತೆ ನಿರ್ವಹಣೆಯ ಬಗ್ಗೆ ಇರುವ ಕಾಳಜಿ ಶೌಚಾಲಯಗಳ ಸ್ವಚ್ಛತೆಯ ಬಗ್ಗೆ ಇಲ್ಲ. ಹೆದ್ದಾರಿಯ ಉದ್ದಕ್ಕೂ ಮಹಿಳೆಯರು ಮತ್ತು ಮಕ್ಕಳು ಶೌಚಾಲಯಕ್ಕಾಗಿ ಪರದಾಡುವ ಸ್ಥಿತಿ ಇದೆ.

ಇನ್ನು ಇದೇ ಹೆದ್ದಾರಿಯ ಬದಿಯಲ್ಲಿ ವಾಹನಗಳನ್ನು ನಿಲ್ಲಿಸಿ ಸ್ವಲ್ಪ ಹೊತ್ತು ವಿಶ್ರಮಿಸೋಣ ಎಂದರೆ ಸರ್ವಿಸ್ ರಸ್ತೆಯಲ್ಲೂ ಜಾಗ ಬಿಟ್ಟಿಲ್ಲ. ಕೆಲವು ಕಡೆ ಸರ್ವಿಸ್ ರಸ್ತೆಯೂ ಇಲ್ಲ. ಮಹಿಳೆಯರು ಬಿಡಿ, ಗಂಡಸರೂ ಪ್ರಕೃತಿ ಬಾಧೆ ತೀರಿಸಿಕೊಳ್ಳಲು ಶೌಚಾಲಯಗಳ ಮೊರೆ ಹೋಗಬೇಕು. ಹೋಟೆಲ್‌ಗಳು ಶೌಚಾಲಯ ಬಳಕೆಗೆ ಅವಕಾಶ ನೀಡಬೇಕೆಂಬ ನಿಯಮವಿದ್ದರೂ, ಅವುಗಳನ್ನು ಬಳಸಲು ಅಲ್ಲಿನ ದುಬಾರಿ ದರವನ್ನು ಭರಿಸುವ ಶಕ್ತಿ ಇರದವರು ಸಂಕೋಚದಿಂದ ದೂರ ಉಳಿಯುವಂತಾಗಿದೆ.

ಹೆದ್ದಾರಿ ಸಮೀಪ ಇತ್ತೀಚೆಗೆ ತಲೆ ಎತ್ತಿರುವ, ಎತ್ತಲು ಸಿದ್ಧವಾಗಿರುವ ಹೋಟೆಲ್‌ಗಳನ್ನು ಕಂಡರೆ ಖುಷಿಗಿಂತ ಹೆಚ್ಚು ದಿಗಿಲಾಗುತ್ತದೆ. ಕುಟುಂಬವೊಂದು ಪಂಚತಾರಾ ಹೋಟೆಲ್‌ಗಳಂತೆ ಕಾಣುವ ಈ ಕಟ್ಟಡಗಳ ಒಳ ಹೊಕ್ಕು ಬಂದರೆ ಸಾಕು, ಜೇಬಿಗೆ ಸಾವಿರ ರು.ಗಳಿಗಿಂತ ಮೇಲಿನ ಕತ್ತರಿ ಬೀಳುವುದು ಖಚಿತ. ಬೆಂಗಳೂರಿನ ಪ್ರತಿಷ್ಠಿತ ಬಡಾವಣೆಗಳಲ್ಲಿ ಒಂದು ಮಿನಿ ಕಾಫಿಗೆ ಹೆಚ್ಚೆಂದರೆ 25ರು. ಆದರೆ ಹೆದ್ದಾರಿ ಹೋಟೆಲ್‌ಗಳಲ್ಲಿ ಮಿನಿ ಕಾಫಿ, ಟೀಗೂ 50 ರು.ಗಳಿಗಿಂತ ಕಡಿಮೆ ಇಲ್ಲ.

ಆತಿಥ್ಯ ಸೇವೆಯಲ್ಲ, ಉದ್ಯಮ

ಹೋಟೆಲ್ ಉದ್ಯಮ ಇಂದು ಸೇವೆಯಾಗಿ ಉಳಿದಿಲ್ಲ, ಬದಲಾಗಿ ಅದು ಬರಬರುತ್ತಾ ಉಳ್ಳವರ ಸೊತ್ತಾಗುತ್ತಿದೆ. ಬಡವರು ಬಿಡಿ, ಮಧ್ಯಮ ವರ್ಗದ ವ್ಯಕ್ತಿಯೂ ತನ್ನ ಕುಟುಂಬದೊಂದಿಗೆ ಇಂತಹ ಹೋಟೆಲ್‌ಗಳಿಗೆ ಪ್ರವೇಶಿಸಲು ಹತ್ತು ಬಾರಿ ಯೋಚಿಸಬೇಕಾಗಿದೆ. ಇಲ್ಲಿನ ಹವಾನಿಯಂತ್ರಿತ ಕೊಠಡಿಗಳು, ಭವ್ಯ ಕಟ್ಟಡಗಳು ಕೇವಲ ವ್ಯಾಪಾರೀ ತಂತ್ರಗಳಾಗಿವೆ. ಹೆದ್ದಾರಿ ಪಕ್ಕದಲ್ಲಿ ತಲೆ ಎತ್ತುತ್ತಿರುವ ಈ ಅರಮನೆ ಮಾದರಿಯ ಹೋಟೆಲ್‌ಗಳಲ್ಲಿ ಜನಸಾಮಾನ್ಯರಿಗೆ ಸಿಗುವುದು ನಗುಮೊಗದ ಸೇವೆಗಿಂತಲೂ ಹೆಚ್ಚಾಗಿ ಬೆಲೆಯ ಶಾಕ್ ಮಾತ್ರ. ಸಾಮಾನ್ಯ ವ್ಯಕ್ತಿಯೊಬ್ಬ ಹೊಟ್ಟೆ ತುಂಬಾ ಊಟ ಮಾಡುವುದು ಕನಸಿನ ಮಾತು. ಇಲ್ಲಿನ ದರಪಟ್ಟಿ ನೋಡಿದರೆ ಬಡವನ ಹಸಿವು ಅರ್ಧ ಸತ್ತುಹೋಗುತ್ತದೆ.

ಇದೇ ರಸ್ತೆಯಲ್ಲಿ ಹಿಂದೆ ನಮ್ಮ ಹಿರಿಯರು ನೆಟ್ಟ ಮರ ಗಿಡಗಳಿದ್ದವು. ನೂರಾರು ವರ್ಷಗಳ ಹಿಂದೆ ನೆಟ್ಟ ಆಲದ ಮರಗಳು ರಾಜ, ಮಹಾರಾಜರ ಕಥೆ ಹೇಳುತ್ತಿದ್ದವು. ಈ ಮರಗಳ ನೆರಳಿನಲ್ಲಿ ಅಲ್ಲಿನ ಹಳ್ಳಿಗರು ತಾವು ಬೆಳೆದ ಬೆಳೆಗಳನ್ನು, ಹಣ್ಣು ಹಂಪಲುಗಳನ್ನು ಮಾರುತ್ತಿದ್ದರು. ಹೊಲ ಗದ್ದೆಗಳು ಕಣ್ಣಿಗೆ ತಂಪೆರೆಯುತ್ತಿದ್ದವು. ಅಲ್ಲಿನ ಸಂಸ್ಕೃತಿ, ಪರಂಪರೆಯ ದರ್ಶನ ಮಾಡಿಸುತ್ತಿದ್ದವು. ಎಲ್ಲಿ ಬೇಕಾದರೂ ವಾಹನ ನಿಲ್ಲಿಸಿ ವಿಶ್ರಮಿಸಿ ಕೊಳ್ಳಬಹುದಿತ್ತು. ಸಣ್ಣ ಪುಟ್ಟ ಹೋಟೆಲ್‌ಗಳು, ಪೆಟ್ಟಿಗೆ ಅಂಗಡಿಗಳಲ್ಲಿ ತಮಗೆ ಇಷ್ಟವಾದುದನ್ನು ಖರೀದಿಸಿ ಮುಂದೆ ಸಾಗುವುದು ನಮ್ಮ ನೆನಪಿನ ಬುತ್ತಿಯ ಭಾಗವಾಗುತ್ತಿತ್ತು.

ಇವೆಲ್ಲವೂ ಇಂದು ಮಾಯವಾಗಿವೆ. ಅಗಲೀಕರಣಗೊಂಡ ಹೆದ್ದಾರಿಗಳು ಹಳ್ಳಿಗಳ ಸ್ವರೂಪವನ್ನೇ ಕಿತ್ತು ಹಾಕಿವೆ. ಈಗ ಎಲ್ಲಿಯೂ ಹಳ್ಳಿಯ ದರ್ಶನವಾಗುತ್ತಿಲ್ಲ. ಹೆದ್ದಾರಿಯುದ್ದಕ್ಕೂ ಹಳ್ಳಿಗರ ಕೈಯಲ್ಲಿದ್ದ ಭೂಮಿಯನ್ನು ಇನ್ನಾವುದೋ ರಾಜ್ಯದ ಶ್ರೀಮಂತ ಕುಳಗಳು ಖರೀದಿಸಿದ್ದಾರೆ. ಇಲ್ಲೆಲ್ಲ ಅರಮನೆಯಂತಹ ಕಟ್ಟಡಗಳು ತಲೆ ಎತ್ತಿವೆ. ಇವು ಸ್ಥಳೀಯರಲ್ಲೂ, ದಾರಿಹೋಕರಲ್ಲೂ ಒಂದು ರೀತಿಯ ಆತಂಕವನ್ನು ಮೂಡಿಸುತ್ತಿವೆ. ಆ ಭವ್ಯತೆ, ಅಲ್ಲಿನ ಪ್ರವೇಶ ದ್ವಾರದಲ್ಲೇ ಇರುವ ಗರಿಗರಿಯಾದ ಸಮವಸ್ತ್ರದ ಭದ್ರತಾ ಸಿಬ್ಬಂದಿ ಎಲ್ಲವೂ ಸಾಮಾನ್ಯ ಮನುಷ್ಯನನ್ನು ನಾನು ಇಲ್ಲಿಗೆ ಅರ್ಹನಲ್ಲ ಎಂದು ಭಾವಿಸುವಂತೆ ಮಾಡುತ್ತಿವೆ. ಈ ಮಾನಸಿಕ ಅಂತರವು ಪ್ರಜಾಪ್ರಭುತ್ವ ವ್ಯವಸ್ಥೆಗೆ ಮಾರಕ. ಮೂಲಭೂತ ಅವಶ್ಯಕತೆಯಾದ ಹಸಿವು ಮತ್ತು ಪ್ರಯಾಣಗಳು ಕೇವಲ ಒಂದು ವರ್ಗಕ್ಕೆ ಸೀಮಿತವಾಗುವುದು ಅಪಾಯಕಾರಿ ಬೆಳವಣಿಗೆ.

ಕರ್ನಾಟಕ ಎಂದರೆ ಕೇವಲ ತಂತ್ರಜ್ಞಾನದ ಹಬ್ ಅಲ್ಲ. ಇಲ್ಲಿನ ನೆಲಕ್ಕೆ ವಿಶೇಷ ಗುಣವಿದೆ. ಇದು ಅನ್ನ, ಅಕ್ಷರ, ಆಧ್ಯಾತ್ಮ ಎಂಬ ತ್ರಿವಿಧ ದಾಸೋಹಗಳನ್ನು ಪರಿಚಯಿಸಿದ ಪುಣ್ಯ ಭೂಮಿ. ಇಲ್ಲಿ ಹಸಿದು ಬಂದವರಿಗೆ ಉಚಿತವಾಗಿ ಅನ್ನ ನೀಡುವ ಪರಂಪರೆ ಇದೆ. ಇಲ್ಲಿ ಶಿವಶರಣರು, ಮಠ ಮಾನ್ಯಗಳು, ದೇಗುಲಗಳು ಶತಮಾನಗಳಿಂದ ಈ ಸಂಸ್ಕೃತಿಯನ್ನು ಪೋಷಿಸಿಕೊಂಡು ಬಂದಿವೆ. ಆದರೆ ಇದೇ ನಾಡಿನ ಹೆದ್ದಾರಿಗಳಲ್ಲಿ ಸಾಗುವಾಗ ಒಬ್ಬ ಬಡವ ಅಥವಾ ಮಧ್ಯಮ ವರ್ಗದ ಪ್ರಯಾಣಿಕ ಒಂದು ತುತ್ತು ಅನ್ನಕ್ಕಾಗಿ ನೂರು ಬಾರಿ ಜೇಬನ್ನು ಸವರಿ ನೋಡಬೇಕಾದ ಸ್ಥಿತಿ ಬಂದಿರುವುದು ಅತ್ಯಂತ ದುರದೃಷ್ಟಕರ.

ದೂರದೃಷ್ಟಿಯಿಲ್ಲದ ಯೋಜನೆ

ಸರಕಾರ ಮತ್ತು ಅಧಿಕಾರಿಗಳು ಹೆದ್ದಾರಿಗಳನ್ನು ಅಭಿವೃದ್ಧಿಪಡಿಸುವಾಗ ಕಾರ್ಪೊರೇಟ್ ದೃಷ್ಟಿಕೋನವನ್ನೇ ಅಳವಡಿಸಿಕೊಳ್ಳುತ್ತಿದ್ದಾರೆ. ಬಡವ ಮತ್ತು ಸಾಮಾನ್ಯ ಮನುಷ್ಯ ಕೂಡ ಈ ರಸ್ತೆಯ ಪಾಲುದಾರ ಎಂಬ ಸತ್ಯವನ್ನು ಮರೆಯುತ್ತಿದ್ದಾರೆ. ಕೇವಲ ಶ್ರೀಮಂತರು ಅಥವಾ ದೊಡ್ಡ ಕಂಪನಿಗಳ ವಾಹನಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಈ ನೀತಿಗಳನ್ನು ರೂಪಿಸಲಾಗುತ್ತಿದೆ. ರಸ್ತೆ ನಿರ್ಮಾಣಕ್ಕೆ ಖಾಸಗಿ ಹೂಡಿಕೆದಾರರನ್ನು ಆಹ್ವಾನಿಸುವುದು ಕೆಟ್ಟದ್ದಲ್ಲ, ಆದರೆ ಅವರು ಹೂಡಿದ ಹಣವನ್ನು ಜನರಿಂದ ಹತ್ತಾರು ಪಟ್ಟು ವಸೂಲಿ ಮಾಡುವಾಗ ಸರಕಾರ ಮೂಕಪ್ರೇಕ್ಷಕನಾಗಬಾರದು. ಸರಕಾರಿ ಪ್ರಾಯೋಜಿತ ಯಾವುದೇ ಯೋಜನೆಗಳಲ್ಲಿ ಶುದ್ಧ ಕುಡಿಯುವ ನೀರು ಮತ್ತು ಉಚಿತ ಶೌಚಾಲಯದ ವ್ಯವಸ್ಥೆಯನ್ನು ಕಡ್ಡಾಯಗೊಳಿಸಬೇಕು.

ಅಭಿವೃದ್ಧಿ ಎಂದರೆ ಕೇವಲ ಅಗಲವಾದ ರಸ್ತೆಗಳಲ್ಲ, ಆ ರಸ್ತೆಗಳಲ್ಲಿ ಸಂಚರಿಸುವ ಅತ್ಯಂತ ಕಟ್ಟಕಡೆಯ ಮನುಷ್ಯನ ಹಸಿವು ಮತ್ತು ಹಕ್ಕುಗಳಿಗೆ ಗೌರವ ಸಿಗುವುದೇ ನಿಜವಾದ ಅಭಿವೃದ್ಧಿ. ಲಾಭ ಬಡುಕತನದ ಹೋಟೆಲ್ ಮಾಲೀಕರು ಮತ್ತು ಕೇವಲ ಆದಾಯದ ಕಡೆಗೆ ಗಮನ ಹರಿಸುವ ಸರಕಾರಗಳು ಎಚ್ಚೆತ್ತುಕೊಳ್ಳದಿದ್ದರೆ, ನಮ್ಮ ಹೆದ್ದಾರಿಗಳು ಕೇವಲ ದರೋಡೆಯ ಮಾರ್ಗಗಳಾಗಿ ಉಳಿಯಲಿವೆ. ಜನಸಾಮಾನ್ಯರ ತೆರಿಗೆಯಿಂದಲೇ ನಿರ್ಮಾಣವಾಗುವ ಈ ರಸ್ತೆಗಳಲ್ಲಿ ಅವರನ್ನೇ ದೂರ ಮಾಡುವುದು ನ್ಯಾಯವಲ್ಲ.

ಜನತಾ ಹೋಟೆಲ್‌ಗಳು ಅವಶ್ಯ

ಹೆದ್ದಾರಿಗಳಲ್ಲಿ ಅದರಲ್ಲೂ ಟೋಲ್ ಕೇಂದ್ರಗಳ ಬಳಿ ಸಾಮಾನ್ಯ ಜನರಿಗೆ ಕೈಗೆಟುಕುವ ದರದಲ್ಲಿ ಆಹಾರ ಸಿಗುವಂತೆ ಜನತಾ ಹೋಟೆಲ್ ಅಥವಾ ಇಂದಿರಾ ಕ್ಯಾಂಟೀನ್ ಮಾದರಿಯ ವ್ಯವಸ್ಥೆ ಅಗತ್ಯವಿದೆ. ಪ್ರತಿಯೊಂದು ಸಣ್ಣ ಪೆಟ್ಟಿಗೆ ಅಂಗಡಿಯನ್ನೂ ತೆರವುಗೊಳಿಸಿ, ಕೇವಲ ಬೃಹತ್ ಹೋಟೆಲ್‌ಗಳಿಗೆ ಜಾಗ ನೀಡುವ ಪ್ರಕ್ರಿಯೆ ಬಡವರ ಬದುಕನ್ನು ಕಸಿದುಕೊಂಡಿದೆ. ಹೆದ್ದಾರಿಗಳಲ್ಲಿ ಕೇವಲ ಖಾಸಗಿ ಹೋಟೆಲ್‌ಗಳಿಗೆ ಕೆಂಪು ಹಾಸಿನ ಸ್ವಾಗತ ಕೋರುವ ಬದಲು, ಸರಕಾರವು ಪ್ರತಿ 60 ಕಿಲೋಮೀಟರ್‌ಗೊಮ್ಮೆ ಜನತಾ ಫುಡ್ ಕೋರ್ಟ್‌ಗಳನ್ನು ಸ್ಥಾಪಿಸಲು ಮುಂದಾಗಬೇಕು. ಇದು ಕೇವಲ ಐಷಾರಾಮಿ ಕಾರುಗಳಲ್ಲಿ ಓಡಾಡುವವರಿಗೆ ಸೀಮಿತವಾಗದೆ, ಕೆಎಸ್ ಆರ್‌ಟಿಸಿ ಕೆಂಪು ಬಸ್ಸುಗಳಲ್ಲಿ ಪ್ರಯಾಣಿಸುವ ಸಾಮಾನ್ಯ ಜನರು ಮತ್ತು ಲಾರಿ ಚಾಲಕರಿಗೂ ಆಶ್ರಯ ತಾಣವಾಗಬೇಕು.

ಅಗ್ಗದ ದರದ ಫುಡ್ ಕೋರ್ಟ್‌ಗಳ ನಿರ್ವಹಣೆಯನ್ನು ಸ್ಥಳೀಯ ಸ್ತ್ರೀಶಕ್ತಿ ಸಂಘಗಳಿಗೆ ಅಥವಾ ನಿರುದ್ಯೋಗಿ ಯುವಕರಿಗೆ ವಹಿಸಿಕೊಡಬಹುದು. ಇದರಿಂದ ಕಡಿಮೆ ದರದಲ್ಲಿ ಗುಣಮಟ್ಟದ, ದೇಶಿ ಆಹಾರ ಸಿಗುವುದಲ್ಲದೆ ಸ್ಥಳೀಯವಾಗಿ ಉದ್ಯೋಗ ಸೃಷ್ಟಿಯೂ ಸಾಧ್ಯವಿದೆ. ಇಂತಹ ಫುಡ್ ಕೋರ್ಟ್ ಸ್ಥಾಪಿಸುವ ಉದ್ಯಮಿಗಳಿಗೆ ಅಥವಾ ಸಂಘಗಳಿಗೆ ಸರಕಾರವು ಭೂಮಿ ಮತ್ತು ವಿದ್ಯುತ್‌ನಲ್ಲಿ ರಿಯಾಯಿತಿ ನೀಡಬೇಕು. ಪ್ರತಿಯಾಗಿ ಅವರು ನಿಗದಿತ ಜನತಾ ದರದಲ್ಲಿ ಆಹಾರ ಒದಗಿಸುವ ಒಪ್ಪಂದಕ್ಕೆ ಬದ್ಧರಾಗಿರಬೇಕು.

ಎಲ್ಲಕ್ಕಿಂತ ಮುಖ್ಯವಾಗಿ ಎಲ್ಲ ಹೋಟೆಲ್‌ಗಳಲ್ಲಿ ಕನಿಷ್ಠ ಆಹಾರ ಪದಾರ್ಥಗಳಾದ ಟೀ, ಕಾಫಿ ಮತ್ತು ಇಡ್ಲಿ, ಉಪ್ಪಿಟ್ಟಿನಂತಹ ನಿತ್ಯ ಬಳಕೆಯ ತಿಂಡಿ ತಿನಿಸುಗಳಿಗೆ ಸರಕಾರವೇ ಒಂದು ಗರಿಷ್ಠ ದರವನ್ನು ನಿಗದಿಪಡಿಸಬೇಕು. ಹೆದ್ದಾರಿಗಳಲ್ಲಿ ಪ್ರತಿ 20-30 ಕಿಲೋ ಮೀಟರ್‌ಗೆ ಒಂದರಂತೆ ಸುಸಜ್ಜಿತ, ಸ್ವಚ್ಛ ಶೌಚಾಲಯಗಳನ್ನು ಸರಕಾರವೇ ನಿರ್ವಹಿಸ ಬೇಕು. ಇದಕ್ಕಾಗಿ ಟೋಲ್ ಶುಲ್ಕದ ಒಂದು ಭಾಗವನ್ನು ಬಳಸಬೇಕು. ಅಭಿವೃದ್ಧಿ ಎಂಬುದು ಕೇವಲ ಟೋಲ್ ಹಣದ ಸಂಗ್ರಹದಲ್ಲಿಲ್ಲ, ಬದಲಾಗಿ ಆ ರಸ್ತೆಯಲ್ಲಿ ಸಾಗುವ ಮನುಷ್ಯನ ಕನಿಷ್ಠ ಅವಶ್ಯಕತೆಗಳು ಗೌರವಯುತವಾಗಿ ಪೂರೈಕೆಯಾಗುವುದರಲ್ಲಿದೆ. ಸರಕಾರವು ಹೆದ್ದಾರಿಗಳನ್ನು ಕೇವಲ ಆದಾಯದ ಮೂಲವಾಗಿ ನೋಡದೆ ಸಾರ್ವಜನಿಕ ಸೇವಾ ಮಾರ್ಗವಾಗಿ ನೋಡಿದಾಗ ಮಾತ್ರ ಈ ಬದಲಾವಣೆ ಸಾಧ್ಯ.




**- ಲೋಕೇಶ್** ಕಾಯರ್ಗ

---

# ಎನ್‌ಸಿಇಆರ್‌ಟಿ ಪಠ್ಯಕ್ರಮಕ್ಕೆ ವಿರುದ್ಧವಾಗಿ ಎಲ್‌ಬಿಎ ವಿಧಾನ

» **ಮೊದಲನೇ ಪುಟದಿಂದ**

ಕಲಿಸುವಂತೆ ಸೂಚಿಸಿರುವುದು ವಿಜ್ಞಾನ ಪಾಠವನ್ನು ಕನ್ನಡ ಪಾಠದಂತೆ ಕಂಠಪಾಠದ ವಿಷಯವನ್ನಾಗಿ ಹೆಚ್ಚು ಕಡೆ ಬೋಧಿಸಲಾಗುತ್ತಿದೆ. ಇದರಿಂದ ವಿದ್ಯಾರ್ಥಿಗಳು ಪ್ರಯೋಗಾತ್ಮಕ ಕಲಿಕೆಯಿಂದ ದೂರವಾಗಿದ್ದು, ಈ ಬಾರಿಯ ಎಸ್‌ಎಸ್‌ಎಲ್‌ಸಿ ಫಲಿತಾಂಶದಲ್ಲಿ ಈ ಬಾರಿ ವಿಜ್ಞಾನ ವಿಷಯದಲ್ಲಿ ಕೇವಲ 636 ವಿದ್ಯಾರ್ಥಿಗಳು ಮಾತ್ರ 100ಕ್ಕೆ 100 ಅಂಕ ಪಡೆದಿದ್ದಾರೆ ಎಂದರು.

ಎನ್‌ಸಿಇಆರ್‌ಟಿ ಅತ್ಯುತ್ತಮ ವಿಜ್ಞಾನ ಪಠ್ಯಕ್ರಮ ರೂಪಿಸಿದ್ದು, ವಿದ್ಯಾರ್ಥಿಗಳು ವಿಜ್ಞಾನ ಅರ್ಥ ಮಾಡಿಕೊಂಡು ಕಲಿಯುವಂತೆ ಮಾಡಲಾಗಿದೆ. ಆದರೆ, ಅದರ ವಿರುದ್ಧವಾಗಿ ಕಂಠಪಾಠ ಆಧಾರಿತ ಎಲ್‌ಬಿಎ ವಿಧಾನ ಜಾರಿಗೆ ತಂದು ವಿದ್ಯಾರ್ಥಿಗಳ ಕಲಿಕಾ ಮಟ್ಟ ಕುಗ್ಗಿಸಲಾಗಿದೆ. ಇದರಿಂದ ಹೆಚ್ಚಿನ ಅಂಕಗಳನ್ನು ಪಡೆಯುವ ಅವಕಾಶವೂ ವಿದ್ಯಾರ್ಥಿಗಳಿಗೆ ಕಡಿಮೆಯಾಗಿದೆ. ಮುಂದೆಯಾದರೂ ಡಿಎಸ್‌ಇಆರ್‌ಟಿ ನಿರ್ದೇಶಕರು ಶಾಲೆಗಳಿಗೆ ನಿರ್ದಿಷ್ಟ ಪ್ರಶ್ನೆಗಳನ್ನು ನೀಡುವ ಪದ್ಧತಿ ನಿಲ್ಲಿಸಿ, ವಿಜ್ಞಾನ ಶಿಕ್ಷಕರಿಗೆ ಸ್ವತಂತ್ರವಾಗಿ ಪ್ರಶ್ನೆ ರೂಪಿಸಿಕೊಳ್ಳಲು ಅವಕಾಶ ನೀಡಬೇಕು. ಶಿಕ್ಷಕರೇ ವಿದ್ಯಾರ್ಥಿಗಳ ಸಾಮರ್ಥ್ಯಕ್ಕೆ ಅನುಗುಣವಾಗಿ ಉತ್ತಮ ಬೋಧನೆ ಮಾಡಬಲ್ಲರೆಂದು ಹೇಳಿದರು.

# ನಟ ಚೇತನ್ ವಿರುದ್ಧ ಕಠಿಣ ಕ್ರಮಕ್ಕೆ ಆಗ್ರಹ



• ಪ್ರಜೋದಯ ವರದಿ

**ಹಾಸನ:** ಡಾ.ರಾಜಕುಮಾರ್ ಅವರ ಪುಣ್ಯಭೂಮಿ ಕುರಿತು ಅವಹೇಳನಕಾರಿ ಹೇಳಿಕೆ ನೀಡಿರುವ ನಟ ಚೇತನ್ ಅಹಿಂಸಾ ವಿರುದ್ಧ ಕಾನೂನು ಕ್ರಮ ಕೈಗೊಂಡು ಅವರನ್ನು ರಾಜ್ಯದಿಂದ ಗಡಿಪಾರು ಮಾಡಬೇಕೆಂದು ಒತ್ತಾಯಿಸಿ ಅಖಿಲ ಕರ್ನಾಟಕ ಡಾ.ರಾಜಕುಮಾರ್ ಅಭಿಮಾನಿಸಂಘಗಳಒಕ್ಕೂಟ ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಿದರು.

ನಗರದ ಎನ್.ಆರ್.ವೃತ್ತದಲ್ಲಿರುವ ಡಾ.ಪುನೀತ್ ರಾಜಕುಮಾರ್ ಪ್ರತಿಮೆ ಬಳಿ ಪ್ರತಿಭಟನೆ ನಡೆಸಿದ ಅಭಿಮಾನಿಗಳು, ನಂತರ ಜಿಲ್ಲಾಡಳಿತದ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಿದರು.

ಈ ವೇಳೆ ಸಂಘದ ಮುಖಂಡ ಜಕ್ಕನಹಳ್ಳಿ ಮೋಹನ್ ಕುಮಾರ್ ಮಾತನಾಡಿ, ಕನ್ನಡಿಗರ ಆರಾಧ್ಯ ದೈವವಾಗಿರುವ ಡಾ.ರಾಜಕುಮಾರ್ ಬಗ್ಗೆ ಅವಹೇಳನಕಾರಿ ಹೇಳಿಕೆ ನೀಡಿರುವುದು ರಾಜ್ಯದ ಜನರ ಭಾವನೆಗೆ ಧಕ್ಕೆ ತಂದಿದೆ. ನಟ ಚೇತನ್ ಇತ್ತೀಚಿನ ದಿನಗಳಲ್ಲಿ ವಿವಾದಾತ್ಮಕ ಹೇಳಿಕೆಗಳ ಮೂಲಕ ಗಮನ ಸೆಳೆಯಲು ಯತ್ನಿಸುತ್ತಿದ್ದು, ಈ ರೀತಿಯ ವರ್ತನೆ ಅಸಹ್ಯಕರವಾಗಿದೆ. ಡಾ.ರಾಜಕುಮಾರ್ ಅವರು ಕೇವಲ ನಟರಲ್ಲ, ಕನ್ನಡ ಭಾಷೆ ಮತ್ತು ಸಂಸ್ಕೃತಿಯ ಪ್ರತೀಕವಾಗಿದ್ದಾರೆ. ಅವರ ಬಗ್ಗೆ ಅವಮಾನಕಾರಿ ಹೇಳಿಕೆಗಳನ್ನು ಸಹಿಸಲಾಗುವುದಿಲ್ಲವೆಂದು ಅಭಿಮಾನಿಗಳು ಎಚ್ಚರಿಕೆ ನೀಡಿದರು.

ಪ್ರತಿಭಟನೆಯಲ್ಲಿ ವಿವಿಧ ಅಭಿಮಾನಿ ಸಂಘಗಳ ಪದಾಧಿಕಾರಿಗಳು ಮತ್ತು ಸದಸ್ಯರು ಭಾಗವಹಿಸಿದ್ದರು.

# ಪ.ಬಂಗಾಳದ ಜನರು ಈ ಬಾರಿ ನಿರಾತಂಕವಾಗಿ ಮತ ಚಲಾಯಿಸುತ್ತಿದ್ದಾರೆ

• ಪ್ರಜೋದಯ ವರದಿ



**ಹರ್ದೋಯಿ:** ಪಶ್ಚಿಮ ಬಂಗಾಳದಲ್ಲಿ ಈ ಬಾರಿ ಮತದಾರರು ನಿರ್ಭಯವಾಗಿ ಮತ ಚಲಾಯಿಸುತ್ತಿದ್ದಾರೆಂದು ಪ್ರಧಾನಿ ನರೇಂದ್ರ ಮೋದಿ ಅವರು ಬುಧವಾರ ತಿಳಿಸಿದ್ದಾರೆ.

ಉತ್ತರ ಪ್ರದೇಶದ ಹರ್ದೋಯಿಯಲ್ಲಿ ಗಂಗಾ ಎಕ್ಸ್‌ಪ್ರೆಸ್‌ವೇ ಉದ್ಘಾಟನೆ ನೆರವೇರಿಸಿ ಮಾತನಾಡಿದ ಅವರು, ಕಳೆದ 67 ದಶಕಗಳಿಗೆ ಹೋಲಿಸಿಕೊಂಡರೆ ಈ ಬಾರಿ ಪಶ್ಚಿಮ ಬಂಗಾಳದಲ್ಲಿ ನಡೆಯುತ್ತಿರುವ ಮತ ದಾನ ನಿರ್ಭೀತಿ ವಾತಾವರಣದಿಂದ ಕೂಡಿದೆ ಎಂದಿದ್ದಾರೆ.

ಪಶ್ಚಿಮ ಬಂಗಾಳದ 142 ಕ್ಷೇತ್ರ ಗಳಲ್ಲಿ 3ನೇ ಹಾಗೂ ಅಂತಿಮ ಹಂತದ ಮತದಾನ ನಡೆಯುತ್ತಿದ್ದು, ಜನರು ಮೊದಲ ಹಂತದಂತೆಯೇ ಭಾರಿ ಸಂಖ್ಯೆಯಲ್ಲಿ ಮನೆಯಿಂದ ಹೊರ ಬಂದು ಮತ ಚಲಾಯಿಸಿದ್ದರೆಂದು ಪ್ರಧಾನಿ ತಿಳಿಸಿದ್ದಾರೆ.

# ಸ್ಮಶಾನ ಜಾಗಕ್ಕಾಗಿ ಎರೆಬೊರೆ ಕಾವಲ್ ಗ್ರಾಮಸ್ಥರ ಒತ್ತಾಯ

## ನಾಲ್ಕು ಎಕರೆ ಜಾಗದಲ್ಲಿ ಕಲ್ಲು ಗಣಿಗಾರಿಕೆಗೆ ಅನುಮತಿ | ಅಧಿಕಾರಿಗಳ ಜೊತೆ ವಾಗ್ವಾದ | ಪ್ರತಿಭಟನೆ ಎಚ್ಚರಿಕೆ

• ಪ್ರಜೋದಯ ವರದಿ

**ಹಾಸನ:** ತಾಲ್ಲೂಕಿನ ಎರೆಬೊರೆ ಕಾವಲ್ ಗ್ರಾಮದಲ್ಲಿ ಸ್ಮಶಾನಕ್ಕೆ ಮೀಸಲಿಟ್ಟಿದ್ದ ನಾಲ್ಕು ಎಕರೆ ಜಾಗದಲ್ಲಿ ಕಲ್ಲು ಗಣಿಗಾರಿಕೆಗೆ ಅನುಮತಿ ನೀಡಿರುವುದನ್ನು ಖಂಡಿಸಿ ಗ್ರಾಮಸ್ಥರು ಸ್ಮಶಾನ ಜಾಗದ ಬಳಿ ಪರಿಶೀಲನೆಗೆ ಆಗಮಿಸಿದ ಅಧಿಕಾರಿಗಳ ಜೊತೆ ವಾಗ್ವಾದ ನಡೆಸಿದರು.



1994 ರಲ್ಲಿ 4.20 ಎಕರೆ ಜಾಗವನ್ನು ರುದ್ರಭೂಮಿಗಾಗಿ ಮೀಸಲಿಟ್ಟ ಜಾಗವನ್ನು ಕ್ರಮೇಣವಾಗಿ ಅಧಿಕಾರಿಗಳು ಉಳ್ಳವರ ಪರವಾಗಿ ಕೆಲಸ ಮಾಡಿ ಸ್ಮಶಾನ ಭೂಮಿಯನ್ನು ಕಲ್ಲು ಗಣಿಗಾರಿಕೆಗೆ ಅನುಮತಿ ನೀಡಿದ್ದಾರೆ, ಕೂಡಲೇ ಮಂಜೂರಾತಿಯನ್ನು ರದ್ದು ಮಾಡಿ ಜಾಗವನ್ನು ಸ್ಮಶಾನಕ್ಕೆ ಮೀಸಲಿಡಬೇಕು ಎಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಗ್ರಾಮದ ಶ್ರೀನಿವಾಸ್ ಅವರು ಮಾತನಾಡಿ, ಸುಮಾರು 45 ಮನೆಗಳನ್ನು ಹೊಂದಿರುವ ನಮ್ಮ ಗ್ರಾಮದಲ್ಲಿ ಸ್ಮಶಾನದ ಜಾಗವಿಲ್ಲದೆ ಕಷ್ಟವಾಗಿದೆ. ಈ ಹಿಂದೆ ಮೀಸಲಿಟ್ಟಿದ್ದ ಜಾಗವನ್ನೇ ನಮಗೆ ಸ್ಮಶಾನಕ್ಕಾಗಿ ಮೀಸಲಿಡಬೇಕು, ಕಳೆದ ಹಲವು ವರ್ಷಗಳಿಂದ ನಮ್ಮ ಗ್ರಾಮದಲ್ಲಿ ಮೃತಪಟ್ಟವರನ್ನು ಇಲ್ಲಿಂದ ಸುಮಾರು 10 ಕಿಮೀ ದೂರವಿರುವ ಬಟ್ಟಗೌಡನಹಳ್ಳಿ ಸ್ಮಶಾನಕ್ಕೆ ತೆಗೆದುಕೊಂಡು ಹೋಗಿ ಅಂತ್ಯಸಂಸ್ಕಾರ ಮಾಡಲಾಗುತ್ತಿದೆ. ಆದರೆ ಇದಕ್ಕಾಗಿ ಸುಮಾರು 20 ರಿಂದ 50 ಸಾವಿರ ರೂ. ವೆಚ್ಚ ತಗಲುತ್ತಿದ್ದು, ಇದು ಬಡವರಿಗೆ ಹೊರೆಯಾಗಿದೆ ಎಂದು ತಮ್ಮ ಅಳಲು ತೋಡಿಕೊಂಡರು.

ಇದೇ ವಿಚಾರವಾಗಿ ಗ್ರಾಮ ಪಂಚಾಯತಿ, ತಹಶೀಲ್ದಾರ್ ಹಾಗೂ ಜಿಲ್ಲಾಧಿಕಾರಿಗಳು ಹೀಗೆ ಎಲ್ಲಾ ಅಧಿಕಾರಿಗಳಿಗೆ ಮನವಿ ನೀಡಿದರೂ ಯಾವುದೇ ಪ್ರಯೋಜನವಾಗಿಲ್ಲ, ಅಧಿಕಾರಿಗಳು ಪ್ರಭಾವಿಗಳ ಜೊತೆ ಶಾಮೀಲಾಗಿ ಇದ್ದೊಂದು ಜಾಗವನ್ನು ಗ್ರಾಮಸ್ಥರ ಗಮನಕ್ಕೆ ಬಾರದೆ ಕಲ್ಲು ಗಣಿಗಾರಿಕೆ ಮಾಡಲು ಅನುಮತಿ ನೀಡಿದ್ದಾರೆ, ಗ್ರಾಮದಲ್ಲಿ ಇದನ್ನು ಬಿಟ್ಟರೆ ಪರ್ಯಾಯ ಜಾಗವೂ ಇರುವುದಿಲ್ಲ. ಆದುದರಿಂದ ಈ ಜಾಗ ಸ್ಮಶಾನಕ್ಕೆ ಮೀಸಲಿಡಬೇಕು ಎಂದು ಒತ್ತಾಯಿಸಿದರು.

ಈಗಾಗಲೆ ಸಂವಿಧಾನಬದ್ಧವಾಗಿ ಹಲವು ಬಾರಿ ಮನವಿ ಮಾಡಿದ್ದೇವೆ, ಮುಂದೆ ನಮ್ಮ ಮನವಿಗೆ ಸ್ಪಂದಿಸಿ ಜಾಗವನ್ನು ಸ್ಮಶಾನಕ್ಕೆ ಮೀಸಲಿಡದೆ ಹೋದರೆ ಗ್ರಾಮದಲ್ಲಿ ಮೃತಪಟ್ಟವರನ್ನು ತಾಲ್ಲೂಕು ಕಚೇರಿ ಹಾಗೂ ಜಿಲ್ಲಾಧಿಕಾರಿ ಕಚೇರಿ ಎದುರು ತಂದು ಅಲ್ಲಿಯೇ ಇಟ್ಟುಕೊಂಡು ಪ್ರತಿಭಟನೆ ನಡೆಸಲಾಗುವುದು ಎಂದು ಎಚ್ಚರಿಸಿದರು.

ಇದಲ್ಲದೆ ಗ್ರಾಮದಲ್ಲಿ ಸುಮಾರು 50 ವರ್ಷಗಳಿಂದ ವಿವಿಧ ಜಾತಿ ಜನಾಂಗದ ಸುಮಾರು 45 ಕುಟುಂಬಗಳು ವಾಸ ಮಾಡುತ್ತಿದ್ದು ತಮಗೆ ತಮಗೆ ಹಕ್ಕು ಪತ್ರ ನೀಡಬೇಕು ಎಂದು ಎಲ್ಲಾ ಅಧಿಕಾರಿಗಳಿಗೂ ಮನವಿ ಮಾಡಿದರೂ ಮನವಿ ಪತ್ರವನ್ನೂ ನೀಡಿಲ್ಲ. ದಯಮಾಡಿ ಅಧಿಕಾರಿಗಳು ಇಲ್ಲಿನ ನಿವಾಸಿಗಳಿಗೆ ಹಕ್ಕುಪತ್ರ ನೀಡಿ ಅನುಕೂಲ ಕಲ್ಪಿಸಬೇಕು ಎಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಗ್ರಾಮಸ್ಥರಾದ ಚಂದ್ರೇಗೌಡ, ಅಭಿಷೇಕ್, ನಂದನ್ ಕುಮಾರ್, ಅಣ್ಣಾದೊರೆ, ದೊರೆಸ್ವಾಮಿ, ಮಂಜುಳಮ್ಮ, ಗೌರಮ್ಮ, ಈಶ್ವರಿ, ಕವಿತಾ, ತಂಗ್ಯಮ್ಮ, ಸೀಮಿತ್ರ, ಅನಿತಾ, ದ್ಯಾವಮ್ಮ, ಜ್ಯೋತಿ, ಮೀನಾಕ್ಷಿ, ಹರೀಶ, ಸಾಕಮ್ಮ, ದಮ್ಮಯ್ಯ, ಮಂಜು ನಾಯಕ್, ಅಭಿ, ಪ್ರಶಾಂತ, ಲಕ್ಷ್ಮಮ್ಮ, ಇತರರು ಉಪಸ್ಥಿತರಿದ್ದರು.

# ನಾಳೆ ಭಗವಾನ್ ಬುದ್ಧ ಜಯಂತಿ

**ಹಾಸನ:** ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಸಹಯೋಗದಲ್ಲಿ ಮೇ 1 ರಂದು ಬೆಳಿಗ್ಗೆ 11 ಗಂಟೆಗೆ ನಗರದ ಹಾಸನಾಂಬ ಕಲಾಕ್ಷೇತ್ರದಲ್ಲಿ ಭಗವಾನ್ ಬುದ್ಧ ಜಯಂತಿ ಕಾರ್ಯಕ್ರಮ ಆಯೋಜಿಸಲಾಗಿದೆ.

ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣ ಬೈರೇಗೌಡ, ಶಾಸಕ ಕೆ.ಎಂ ಶಿವಲಿಂಗೇಗೌಡ ಅವರು ಗೌರವ ಉಪಸ್ಥಿತಿ ವಹಿಸಲಿದ್ದು, ಶಾಸಕ ಸ್ವರೂಪ್ ಪ್ರಕಾಶ್ ಅಧ್ಯಕ್ಷತೆ ವಹಿಸಲಿದ್ದಾರೆ.

ಸಂಸದ ಶ್ರೇಯಸ್ ಎಂ. ಪಟೇಲ್, ಶಾಸಕರಾದ ಹೆಚ್.ಡಿ ರೇವಣ್ಣ, ಸಿ.ಎನ್. ಬಾಲಕೃಷ್ಣ, ಎ.ಮಂಜು, ಹೆಚ್.ಕೆ.ಸುರೇಶ್, ಸಿಮೆಂಟ್ ಮಂಜು, ವಿಧಾನ ಪರಿಷತ್ ಶಾಸಕರುಗಳಾದ ಸೂರಜ್ ರೇವಣ್ಣ, ಮಧು ಜಿ. ಮಾದೇಗೌಡ, ಕೆ, ವಿವೇಕಾನಂದ, ನಾಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪಟೇಲ್ ಶಿವಣ್ಣ ಮುಖ್ಯ ಅತಿಥಿಗಳಾಗಿ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ಧಮ್ಮಚಾರಿ ಬೌದ್ಧ ಮಹಾಸಭಾದ ಎನ್.ಬಿ. ವೀರಭದ್ರಯ್ಯ ಅವರು ಉಪನ್ಯಾಸ ನೀಡಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

# ಜಾಮೀನು ನೀಡುವಂತೆ ಸುಪ್ರೀಂಕೋರ್ಟ್ ಮೊರೆ ಹೋದ ಕೊಲೆ ಆರೋಪಿ ದರ್ಶನ್

• ಪ್ರಜೋದಯ ವರದಿ



**ಬೆಂಗಳೂರು:** ರೇಣುಕಾಸ್ವಾಮಿ ಮರ್ಡರ್ ಕೇಸ್‌ನಲ್ಲಿ ನ್ಯಾಯಾಂಗ ಬಂಧನದಲ್ಲಿರುವ ಆರೋಪಿ ದರ್ಶನ್ ಅವರು ಮತ್ತೊಮ್ಮೆ ಜಾಮೀನು ನೀಡುವಂತೆ ಸುಪ್ರೀಂಕೋರ್ಟ್ ಮೊರೆ ಹೋಗಿದ್ದಾರೆ.

ನಟ ದರ್ಶನ್ ಸೇರಿದಂತೆ ಪ್ರಮುಖ ಆರೋಪಿಗಳು ಈಗ ಪರಪ್ಪನ ಅಗ್ರಹಾರ ಜೈಲಿನಲ್ಲಿದ್ದಾರೆ. ಪ್ರಕರಣ ಇನ್ನೂ ವಿಚಾರಣೆ ಹಂತದಲ್ಲಿದೆ. ಆದರೆ ವಿಚಾರಣೆ ಮಂದಗತಿಯಲ್ಲಿ ಸಾಗುತ್ತಿದೆ. ಈ ಕಾರಣಕ್ಕೆ ದರ್ಶನ್ ಜಾಮೀನು ಕೋರಿ ಅರ್ಜಿ ಸಲ್ಲಿಸಿದ್ದಾರೆ.

ದರ್ಶನ್ ಪರ ಹಿರಿಯ ವಕೀಲ ಮುಕುಲ್ ರೋಹ್ಟಗಿ ಸುಪ್ರೀಂ ಕೋರ್ಟ್ ನಲ್ಲಿ ಜಾಮೀನಿಗೆ ಅರ್ಜಿ ಸಲ್ಲಿಸಿದ್ದಾರೆ. ಈ ಅರ್ಜಿ ವಿಚಾರಣೆ ಮೇ 4 ಕ್ಕೆ ನಿಗದಿಯಾಗಿದೆ. ಟ್ರಯಲ್ ವಿಳಂಬವಾಗುತ್ತಿದೆ. 8 ತಿಂಗಳು ಕಳೆದರೂ ಸಾಕ್ಷಿಗಳ ವಿಚಾರಣೆ ಮುಗಿದಿಲ್ಲ. ವಿಚಾರಣೆಗೆ ಸಕಾರಾತ್ಮಕವಾಗಿ ಸ್ಪಂದಿಸುತ್ತೇನೆ. ಹೀಗಾಗಿ ಜಾಮೀನು ನೀಡಿ ಎಂದು ಅವರು ಕೋರಿದ್ದಾರೆ.

ಈ ಹಿಂದೆ ದರ್ಶನ್ ಜಾಮೀನು ಅರ್ಜಿ ಸುಪ್ರೀಂಕೋರ್ಟ್ ನಲ್ಲಿ ತಿರಸ್ಕೃತವಾಗಿತ್ತು. ಪರಿಣಾಮ ಜಾಮೀನಿನ ಮೇಲೆ ಬಿಡುಗಡೆಯಾಗಿದ್ದ ಅವರು ಮತ್ತೆ ನ್ಯಾಯಾಂಗ ಬಂಧನಕ್ಕೊಳಗಾಗಿದ್ದರು. ಪ್ರಕರಣದಲ್ಲಿ ಒಟ್ಟು 273 ಸಾಕ್ಷಿಗಳ ವಿಚಾರಣೆ ಆಗಬೇಕು. ಆದರೆ ಇದುವರೆಗೆ ಕೇವಲ 15 ಸಾಕ್ಷಿಗಳ ವಿಚಾರಣೆಯಷ್ಟೇ ಮುಗಿದಿದೆ.

# ಭಾರೀ ಬಿರುಗಾಳಿಗೆ ಧರೆಗುರುಳಿದ ವಿದ್ಯುತ್ ಕಂಬಗಳು

• ಪ್ರಜೋದಯ ವರದಿ

**ಆಲೂರು:** ಮಂಗಳವಾರ ಸಂಜೆ ಬೀಸಿದ ಭಾರೀ ಬಿರುಗಾಳಿ, ಮಳೆಗೆ ಸಿಲುಕಿ ಹಲವು ಮರಗಳು ವಿದ್ಯುತ್ ತಂತಿ ಹಾಗೂ ಕಂಬದ ಮೇಲೆ ಬಿದ್ದು ವಿದ್ಯುತ್ ವ್ಯತ್ಯಯ ಉಂಟಾಗಿತ್ತು. ಸೆಸ್ಕ್ ಇಲಾಖೆ ಸಿಬ್ಬಂದಿಗಳು ಕೂಡಲೆ ದುರಸ್ತಿ ಕಾರ್ಯ ಕೈಗೊಂಡು ಅನೇಕ ಗ್ರಾಮಗಳಿಗೆ ಈಗಾಗಲೆ ವಿದ್ಯುತ್ ಸಂಪರ್ಕ ಕಲ್ಪಿಸಿದ್ದಾರೆ.

ಕಸಬಾ ಕಣತೂರು ಗ್ರಾಮ ಪಂಚಾಯಿತಿ ವ್ಯಾಪ್ತಿಗೊಳಪಡುವ ಜೆ.ತಿಮ್ಮನಹಳ್ಳಿ, ಮಡಬಲು, ತಾಳೂರು, ಮುರುಡೂರು, ಕಾಮತಿ, ನಾಕಲಗೂಡು, ಬೆಳ್ಳೂರು, ಕಾರ್ಜುವಳ್ಳಿ ಕೂಡಿಗೆ, ಹಳುವಳ್ಳಿ ಕಾಲೋನಿ, ಬೆಳ್ಳಾವರ, ಲಿಂಗರಾಜಪುರ, ಲಕ್ಷ್ಮಿಪುರ ಸೇರಿದಂತೆ ಸುತ್ತಮುತ್ತಲಿನ ಅನೇಕ ಗ್ರಾಮಗಳಲ್ಲಿ ಮಂಗಳವಾರ ಮದ್ಯಾಹ್ನ ಬಹುತೇಕ ಎಲ್ಲ ಗ್ರಾಮಗಳಿಗೂ ಬುಧವಾರ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ. ಜೆ.ತಿಮ್ಮನಹಳ್ಳಿ ಗ್ರಾಮದಲ್ಲಿ ಮುರಿದು ಬಿದ್ದಿರುವ ಕಂಬಗಳನ್ನು ಬದಲಾಯಿಸಿ ಹೊಸ ಕಂಬ ಹಾಕಿದ ನಂತರ ವಿದ್ಯುತ್ ಸಂಪರ್ಕ ಕಲ್ಪಿಸಲಾಗುವುದು ಎಂದು ಜ್ಯೂನಿಯರ್ ಇಂಜಿನಿಯರ್ ಕುಮಾರ್ ತಿಳಿಸಿದ್ದಾರೆ.



ಭಾರಿ ಮಳೆ ಬಿರುಗಾಳಿ ಪರಿಣಾಮದಿಂದ 3 ವಿದ್ಯುತ್ ಪರಿವರ್ತನ ಕಂಬಗಳು ಸೇರಿದಂತೆ ಅನೇಕ ಕಂಬಗಳು ಧರೆಗುರುಳಿದವು.

ಆಲೂರು ಕಸಬಾ 15 ಮಿ.ಮಿ. ಮಳೆಯಾಗಿದೆ. ಉಳಿದಂತೆ ಪಾಳ್ಯ ಕುಂದೂರು, ಕೆ.ಹೊಸಕೋಟೆ ಹೋಬಳಿಯಲ್ಲಿ ತುಂತುರು ಮಳೆಯಾಗಿದೆ. ಕಸಬಾ ಹೋಬಳಿಯಲ್ಲಿ ಬಾರಿ ಬಿರುಗಾಳಿಯೊಂದಿಗೆ ಹದ ಮಳೆಯಾದ ವರದಿಯಾಗಿದೆ. ಹಾಗಾಗಿ ಸುತ್ತಮುತ್ತಲಿನ ರೈತರು ಮಳೆಯಿಂದ ಸಂತಸಗೊಂಡಿದ್ದು, ಸೆಕೆಯಿಂದ ಬಳಲಿದ್ದ ಜನರಿಗೆ ತಂಪೆರೆದಂತಾಗಿದೆ.

# ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಅಶ್ಲೀಲ ಹಾಡುಗಳು, ನೃತ್ಯಗಳಿಗೆ ನಿಷೇಧ

• ಪ್ರಜೋದಯ ವರದಿ

**ಬೆಂಗಳೂರು:** ವಿದ್ಯಾರ್ಥಿಗಳ ಜೀವನ ರೂಪಿಸುವಲ್ಲಿ ಶಾಲೆಗಳು ಬಹಳ ಮುಖ್ಯ ಪಾತ್ರ ವಹಿಸುತ್ತವೆ. ಜೀವನದ ಮೌಲ್ಯಗಳು, ಶಿಸ್ತು ಶಾಲೆಯಿಂದಲೇ ವಿದ್ಯಾರ್ಥಿಗಳು ಜೀವನದಲ್ಲಿ ಅಳವಡಿಸಿಕೊಳ್ಳುತ್ತಾರೆ. ಆದರೆ ಅಂತಹ ಶಾಲೆಗಳ ಸಾಂಸ್ಕೃತಿಕ ಕಾರ್ಯಕ್ರಮಗಳ ಹೆಸರಲ್ಲಿ ಅಸಭ್ಯ, ಅಶ್ಲೀಲ ಹಾಡುಗಳನ್ನು ಹಾಕಿ ನೃತ್ಯ ಮಾಡಿದ್ರೆ ವಿದ್ಯಾರ್ಥಿಗಳ ಮೇಲೆ ಗಂಭೀರ ಪರಿಣಾಮ ಬೀಳಲಿದೆ.

ಈ ಹಿನ್ನೆಲೆಯಲ್ಲಿ ಕರ್ನಾಟಕ ಶಾಲಾ ಶಿಕ್ಷಣ ಇಲಾಖೆಯು ಮಹತ್ವದ ನಿರ್ಧಾರ ಕೈಗೊಂಡಿದ್ದು, ಕರ್ನಾಟಕದ ಸರಕಾರಿ ಶಾಲೆಗಳು, ಅನುದಾನಿತ ಹಾಗೂ ಅನುದಾನ ರಹಿತ ಶಾಲೆಗಳಲ್ಲಿ ಈ ರೀತಿ ಅಶ್ಲೀಲ ಹಾಡುಗಳನ್ನು ಹಾಗೂ ನೃತ್ಯ ಮಾಡುವುದಕ್ಕೆ ನಿಷೇಧ ಹೇರಲಾಗಿದೆ.



ಕೆಲವು ಸಾಂಸ್ಕೃತಿಕ ತಂಡಗಳು ಈ ಕುರಿತು ಧ್ವನಿ ಎತ್ತಿದ ಫಲವಾಗಿ ಈ ಬದಲಾವಣೆಯನ್ನು ಮಾಡಲಾಗಿದೆ. ಶಾಲೆಗಳ ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಪ್ರೋತ್ಸಾಹ ಇದೆ, ಆದರೆ ಅರ್ಥಹೀನ ಹಾಗೂ ಕೆಟ್ಟ ಅಸಭ್ಯ ಅರ್ಥಗಳನ್ನು ಹೊಂದಿರುವ ಹಾಡುಗಳನ್ನು ಬಳಸಬಾರದು. ಶಾಲೆಗಳು ಜ್ಞಾನದ ದೇವಾಲಯ ಇದ್ದಂತೆ, ವಿದ್ಯಾರ್ಥಿಗಳ ವ್ಯಕ್ತಿತ್ವವನ್ನು ರೂಪಿಸುವಲ್ಲಿ ಮಹತ್ವದ ಪಾತ್ರಹಿಸುತ್ತದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಕೆಲವು ಅಶ್ಲೀಲ ಅನಿಸುವ ಸಾಹಿತ್ಯವಿರುವ ಸಿನಿಮಾ ಹಾಡುಗಳು, ಇತರೆ ಹಾಡುಗಳನ್ನು ನೃತ್ಯಕ್ಕೆ ಬಳಸುವುದರಿಂದ ಮಕ್ಕಳ ನೈತಿಕ ಹಾಗೂ ಮಾನಸಿಕ ಆರೋಗ್ಯದ ಮೇಲೆ ಗಂಭೀರ ಪರಿಣಾಮ ಬೀಳಲಿದೆ.

**ಮಾರ್ಗಸೂಚಿಯಲ್ಲಿ ಏನೇನಿದೆ?**

ಶಾಲಾ ಕಾರ್ಯಕ್ರಮಗಳಲ್ಲಿ ಆಯ್ಕೆ ಮಾಡುವ ಹಾಡುಗಳು, ಮೌಲ್ಯಗಳನ್ನು ಎತ್ತಿಹಿಡಿಯುವ, ರಾಷ್ಟ್ರೀಯ ಅಭಿಮಾನವನ್ನು ಮೂಡಿಸುವ ಹಾಗೂ ಉತ್ತಮ ಸಕಾರಾತ್ಮಕ ಸಾಹಿತ್ಯವಿರುವ ಸಂಗೀತಕ್ಕೆ ಆದ್ಯತೆ ಕೊಡಬೇಕು. ಅಶ್ಲೀಲ ಸಾಹಿತ್ಯಗಳನ್ನು ಹೊಂದಿರುವ ಹಾಡುಗಳು, ದ್ವಂದ್ವಾರ್ಥ ನೀಡುವ ಹಾಡುಗಳು, ಸಮಾಜಕ್ಕೆ ತಪ್ಪು ಸಂದೇಶ ನೀಡುವ ಹಾಡುಗಳಿಗೆ ಮಕ್ಕಳ ನೃತ್ಯ ನಿಷೇಧಿಸಲಾಗಿದೆ. ನೃತ್ಯ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ವಿದ್ಯಾರ್ಥಿಗಳ ಉಡುಪು ಕೂಡಾ ಸಭ್ಯವಾಗಿರಬೇಕು. ಅರೆಬರೆ ವಸ್ತ್ರಗಳನ್ನು ಧರಿಸುವ ಹಾಗಿಲ್ಲ.

ಜಾನಪದ, ದೇಶಭಕ್ತಿಗೀತೆ, ಪರಿಸರ ಕಾಳಜಿಯ ಗೀತೆಗಳು, ರಾಷ್ಟ್ರಪ್ರೇಮ, ಹಾಗೂ ಸಮಾಜಮುಖಿ ಚಿಂತನೆಯ ಹಾಡುಗಳನ್ನು ಆಯ್ಕೆ ಮಾಡಬೇಕು.

ಈ ನಾಲ್ಕು ಅಂಶಗಳೊಂದಿಗೆ ಕಟ್ಟುನಿಟ್ಟಾಗಿ ಮಾರ್ಗಸೂಚಿ ಪಾಲನೆ ಮಾಡಬೇಕೆಂದು ಶಿಕ್ಷಣ ಇಲಾಖೆ ಆದೇಶ ಹೊರಡಿಸಿದೆ. ಇದನ್ನು ಪಾಲಿಸುವ ಜವಾಬ್ದಾರಿ ಶಾಲಾ ಮುಖ್ಯಸ್ಥರು ಹಾಗೂ ಆಡಳಿತ ಮಂಡಳಿಗೆ ನೀಡಲಾಗಿದೆ. ನಿಯಮ ಮೀರಿದರೆ, ಅಶ್ಲೀಲ ಹಾಡುಗಳಿಗೆ ನೃತ್ಯ ಮಾಡಿಸಿದರೆ ಶಾಲಾ ಮುಖ್ಯೋಪಾಧ್ಯಾಯರು ಹಾಗೂ ಸಂಬಂಧಿಸಿದ ಶಿಕ್ಷಕರನ್ನೇ ನೇರ ಹೊಣೆ ಮಾಡಿ ಶಿಸ್ತುಕ್ರಮ ಜರುಗಿಸಲಾಗುವುದು ಎಂದು ಆಯುಕ್ತರು ಎಚ್ಚರಿಸಿದ್ದಾರೆ.

# ಆಚಾರ್ಯ ಪದಕ್ಕೆ ವಿಶೇಷ ಅರ್ಥ ನೀಡಿದವರು ಶಂಕರಾಚಾರ್ಯರು

## ಜ್ಞಾನ ಮಾರ್ಗದಿಂದ ಮೋಕ್ಷ ಸಾಧ್ಯ ಎಂಬುದು ಅವರ ಮುಖ್ಯ ಬೋಧನೆ

• ಪ್ರಜೋದಯ ವರದಿ

**ಹಾಸನ:** ಆಚಾರ್ಯ ಧರ್ಮಕ್ಕೆ ವಿಶೇಷವಾದ ಗೌರವ ನೀಡುವುದರ ಮೂಲಕ ತತ್ವಜ್ಞಾನಿಗಳಾಗಿ ವಿಶೇಷತೆಯನ್ನು ಶಂಕರಾಚಾರ್ಯರು ಪಡೆದಿದ್ದಾರೆ ಎಂದು ದೊಡ್ಡಗದ್ದವಳ್ಳಿ ಸರ್ಕಾರಿ ಪ್ರೌಢಶಾಲೆ ನಿವೃತ್ತ ಮುಖ್ಯೋಪಾಧ್ಯಾಯ ಪರಮೇಶ್ವರ್ ವಿ.ಭಟ್ ಅವರು ತಿಳಿಸಿದ್ದಾರೆ.

ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಸಹಯೋಗದಲ್ಲಿ ಹಾಸನಾಂಬ ಕಲಾಕ್ಷೇತ್ರದಲ್ಲಿ ಬುಧವಾರ ಏರ್ಪಡಿಸಲಾಗಿದ್ದ ಶ್ರೀ ಶಂಕರಾಚಾರ್ಯ ಜಯಂತಿ ಉದ್ಘಾಟಿಸಿ ಮಾತನಾಡಿದ ಅವರು, ಸಮಾಜದ ಒಳಿತಿಗಾಗಿ ಶಂಕರಾಚಾರ್ಯರು ತತ್ವಪದಗಳ ಮೂಲಕ ಹಲವಾರು ಸಂದೇಶಗಳನ್ನು ಸಮಾಜಕ್ಕೆ ಕೊಡುಗೆಯಾಗಿ ನೀಡಿದ್ದಾರೆ ಹಾಗೂ ಮಾದರಿಯಾಗಿದ್ದಾರೆ ಎಂದರು.



ಒಳ್ಳೆಯ ಶಿಷ್ಯರಾಗಬೇಕು ಎಂದರೆ ಯೋಗ್ಯ ಗುರು ಇರಬೇಕು. ಹಾಗೆಯೇ ಯೋಗ್ಯ ಗುರು ಆಗಬೇಕು ಅಂದರೆ ಯೋಗ್ಯ ಶಿಷ್ಯರು ಇರಬೇಕು ಎಂದು ಶಂಕರಾಚಾರ್ಯರು ಗುರು ಶಿಷ್ಯರ ಸಂಬಂಧಕ್ಕೆ ಮೆರುಗು ತಂದಿದ್ದಾರೆ ಎಂದು ತಿಳಿಸಿದರು.

ಆಳವಾದ ಭಾರತೀಯ ತತ್ವಜ್ಞಾನಿ ಮತ್ತು ದೇವತಾ ಶಾಸ್ತ್ರಜ್ಞರಾಗಿದ್ದು ಅದ್ವೈತ ವೇದಾಂತವನ್ನು ಪ್ರಚಾರ ಮಾಡುವ ಮೂಲಕ ಚಿಂತನೆಯನ್ನು ಏಕೀಕರಿಸಿ ಹಾಗೂ ಜಗತ್ತು ಭ್ರಮೆ ಮತ್ತು ವ್ಯಕ್ತಿಯ ಆತ್ಮವು ಪರಮಾತ್ಮನಿಂದ ಬೇರೆಯಲ್ಲ ಎಂಬ ಏಕತ್ವವನ್ನು ಅವರು ಪ್ರತಿಪಾದಿಸಿದರು ಎಂದು ಹೇಳಿದರು.

ಜ್ಞಾನ ಮಾರ್ಗದಿಂದ ಮೋಕ್ಷ ಸಾಧ್ಯ ಎಂಬುದು ಅವರ ಮುಖ್ಯ ಬೋಧನೆಯಾಗಿದೆ, ಸನಾತನ ಭಾರತದ ಸಂಸ್ಕೃತಿಯನ್ನು ಜಗತ್ತಿಗೆ ಸಾರಿ ಹೇಳಿದ ಆಚಾರ್ಯರಲ್ಲಿ ಶಂಕರಾಚಾರ್ಯರು ಮೊದಲಿಗರು ಹಾಗೂ ಸಮಾಜಕ್ಕೆ ಶಂಕರಾಚಾರ್ಯರ ಕೊಡುಗೆ ಅಪೂರ್ವ ಎಂದು ಹೇಳಿದರು.

ಶಂಕರಾಚಾರ್ಯರು ಹಿಂದೂ ಧರ್ಮದ ದಾರ್ಶನಿಕ ಅಡಿಪಾಯವನ್ನು ಬಲಪಡಿಸಿದವರು ಮತ್ತು ಸನಾತನ ಧರ್ಮದ ರಕ್ಷಕರೆಂದು ಹೆಸರಾದ ಮಹಾನ್ ತತ್ವಜ್ಞಾನಿಗಳು ಎಂದರು ತಿಳಿಸಿದರು.

ಜಿಲ್ಲಾಧಿಕಾರಿ ಕಚೇರಿ ಸಹಾಯಕ ಎಲ್.ಎಸ್.ರಮೇಶ್ ಅವರು ಶಂಕರಚಾರ್ಯರ ತತ್ವಗಳು ಮತ್ತು ನಿರ್ದೇಶನಗಳನ್ನೂ ಪ್ರತಿನಿತ್ಯ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಹೆಚ್.ಪಿ. ತಾರಾನಾಥ್ ಹಾಗೂ ಮತ್ತಿತರರು ಉಪಸ್ಥಿತರಿದ್ದರು.

# ‘ಎವಿಕೆ ಟ್ಯಾಲೆಂಟ್ ಸ್ಕಾಲರ್ಶಿಪ್ ಟೆಸ್ಟ್’ ಯಶಸ್ವಿ

• ಪ್ರಜೋದಯ ವರದಿ

**ಹಾಸನ:** ನಗರದ ಎ.ವಿ.ಕೆ. ಪಿಯು ಕಾಲೇಜಿನಲ್ಲಿ ಎಸ್‌ಎಸ್‌ಎಲ್‌ಸಿ ಪಾಸಾದ ವಿದ್ಯಾರ್ಥಿಗಳಿಗಾಗಿ ಹಮ್ಮಿಕೊಳ್ಳಲಾಗಿದ್ದ ಎವಿಕೆ ಟ್ಯಾಲೆಂಟ್ ಸ್ಕಾಲರ್ಶಿಪ್ ಟೆಸ್ಟ್ ಯಶಸ್ವಿಯಾಗಿ ಜರುಗಿತು.

ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ಮೊದಲ ಮೂರು ವಿದ್ಯಾರ್ಥಿಗಳಿಗೆ ಕ್ರಮವಾಗಿ ₹10,000, ₹7,000 ಮತ್ತು ₹ 5,000 ನಗದು ಬಹುಮಾನ ಘೋಷಿಸಲಾಗಿದ್ದು, ಮುಂದಿನ 5 ವಿದ್ಯಾರ್ಥಿಗಳಿಗೆ ತಲಾ ₹1,000 ಸಮಾಧಾನಕರ ಬಹುಮಾನ ನೀಡಿ ಗೌರವಿಸಲಾಯಿತು. ಕೇವಲ ನಗದು ಬಹುಮಾನ ಮಾತ್ರವಲ್ಲದೆ, ಮೊದಲ 20 ಶ್ರೇಯಾಂಕಿತ ವಿದ್ಯಾರ್ಥಿಗಳಿಗೆ 2025-26ನೇ ಸಾಲಿನ ಪ್ರವೇಶಾತಿಯಲ್ಲಿ ವಿಶೇಷ ರಿಯಾಯಿತಿ ಹಾಗೂ ಸ್ಕಾಲರ್ಶಿಪ್ ಸೌಲಭ್ಯವನ್ನು ಕಾಲೇಜು ಮಂಡಳಿ ನೀಡಿದೆ.



ಇದೇ ಸುಸಂದರ್ಭದಲ್ಲಿ ಕಾಲೇಜು ಆಡಳಿತ ಮಂಡಳಿಯು ವಿದ್ಯಾರ್ಥಿಗಳ ಭವಿಷ್ಯದ ದೃಷ್ಟಿಯಿಂದ ಮತ್ತೊಂದು ಮಹತ್ವದ ನಿರ್ಧಾರವನ್ನು ಪ್ರಕಟಿಸಿತು. ದೇಶದ ಪ್ರತಿಷ್ಠಿತ ತರಬೇತಿ ಸಂಸ್ಥೆಯಾದ ಆಕಾಶ್ ನೊಂದಿಗೆ ಸಹಯೋಗ ಹೊಂದಿದ್ದು, ಇನ್ನು ಮುಂದೆ ಕಾಲೇಜಿನಲ್ಲಿಯೇ ಜೆಇಇ ಮತ್ತು ಐಐಟಿ ಪರೀಕ್ಷೆಗಳಿಗೆ ಉನ್ನತ ಮಟ್ಟದ ತರಬೇತಿ ನೀಡಲಾಗುವುದು ಎಂದು ತಿಳಿಸಲಾಯಿತು.

ಪ್ರವೇಶಾತಿ ಪಡೆಯಲು ಇಚ್ಛಿಸುವ ವಿದ್ಯಾರ್ಥಿಗಳು ತಕ್ಷಣ ಕಾಲೇಜನ್ನು ಸಂಪರ್ಕಿಸಿ ಈ ಸೌಲಭ್ಯದ ಪ್ರಯೋಜನ ಪಡೆಯಬಹುದಾಗಿದೆ ಎಂದು ಕಾಲೇಜು ಆಡಳಿತ ಮಂಡಳಿ ತಿಳಿಸಿದೆ.

ನಾಗರಾಜ್ ಜೈನ್, ಅನಿಲ್, ಬ್ರಾಂಚ್ ನಾಗಭೂಷಣ್, ಕಾರ್ಮೆಲ್ ಶ್ರೀನಾ, ಮೈಲ್ ಸ್ಟೋನ್ ಸಂಸ್ಥೆಯ ಮುಖ್ಯಸ್ಥ ಪ್ರಜ್ವಲ್ ಹಾಜರಿದ್ದರು.

# ವೀರಶೈವ ಲಿಂಗಾಯಿತ ಮಹಾಸಭಾಕ್ಕೆ ಚುನಾವಣೆ

• ಪ್ರಜೋದಯ ವರದಿ

**ಹೊಳೆನರಸೀಪುರ:** ಅಖಿಲ ಭಾರತ ವೀರಶೈವ ಲಿಂಗಾಯಿತ ಮಹಾಸಭಾ ತಾಲ್ಲೂಕು ಘಟಕಕ್ಕೆ ಚುನಾವಣೆ ನಿಗಧಿಯಾಗಿದ್ದು, ಮೇ 6 ರಂದು ನಾಮಪತ್ರ ಸಲ್ಲಿಸಲು ಕೊನೆ ದಿನವಾಗಿದೆ ಎಂದು ಸಂಘದ ಸಹಾಯಕ ಚುನಾವಣಾಧಿಕಾರಿ ಯೋಗೇಶ್ ಬೋರನಹಳ್ಳಿ ತಿಳಿಸಿದ್ದಾರೆ.

ಪತ್ರಿಕಾಗೋಷ್ಟಿಯಲ್ಲಿ ಮಾತನಾಡಿದ ಅವರು, ಮೇ 24 ರಂದು ಚುನಾವಣೆ ನಡೆಯಲಿದೆ. ಸ್ಪರ್ಧೆ ಬಯಸುವವರು ಮೇ 6 ರ ಮದ್ಯಾಹ್ನ 3 ಗಂಟೆಯವರೆಗೂ ನಾಮಪತ್ರ ಸಲ್ಲಿಸಬಹುದು. ಮೇ. 7 ರಂದು ಸಲ್ಲಿಕೆಯಾದ ನಾಮಪತ್ರಗಳ ಪರಿಶೀಲನೆ ನಡೆಸಲಾಗುವುದು. ಮೇ 10 ನಮಪತ್ರ ಹಿಂಪಡೆಯಲು ಕಡೆ ದಿನವಾಗಿರುತ್ತದೆ. ಮೇ 24 ರ ಭಾನುವಾರ ಬೆಳಗ್ಗೆ 8 ರಿಂದ ಸಂಜೆ 4 ರ ವರೆಗೂ ಮತದಾನಕ್ಕೆ ಅವಕಾಶ ಮಾಡಲಾಗಿದೆ. ಮತದಾನದ ನಂತರ ಮತ ಎಣಿಕೆ ಕಾರ್ಯ ನಡೆಸಲಾಗುತ್ತದೆ.

ತಾಲೂಕು ಘಟಕ ಒಂದು ಅಧ್ಯಕ್ಷ ಸ್ಥಾನ, 13 ಪುರುಷ ಹಾಗೂ 7 ಮಹಿಳಾ ಒಟ್ಟು 21 ಕಾರ್ಯಕಾರಿ ಸಮಿತಿ ಸದಸ್ಯರನ್ನು ಒಳಗೊಂಡಿರುತ್ತದೆ. ಪ್ರಸ್ತುತ ಕಾರ್ಯಕಾರಿ ಸಮಿತಿಯ ಅಧ್ಯಕ್ಷ ಸ್ಥಾನವೂ ಸೇರಿದಂತೆ 21 ಸದಸ್ಯತ್ವ ಸ್ಥಾನಗಳಿಗೆ ಚುನಾವಣೆ ನಡೆಸಲಾಗುತ್ತಿದೆ. ತಾಲೂಕು ಘಟಕದಲ್ಲಿ ಒಟ್ಟು 893 ಮತದಾರರಿದ್ದಾರೆ.

ಪಟ್ಟಣದ ವೀರಶೈವ ಲಿಂಗಾಯಿತ ನೌಕರರ ಕ್ಷೇಮಾಭಿವೃದ್ಧಿ ಸಂಘದ ಕಚೇರಿಯಲ್ಲಿ ನಾಮಪತ್ರ ಸಲ್ಲಿಸಲು ಅರ್ಜಿ ನಮೂನೆ ಪಡೆದಯಬಹುದು.

ತಾಲ್ಲೂಕು ಘಟಕದ ಅಧ್ಯಕ್ಷ ದೇವರಾಜ್, ಸಂಚಾಲಕ ಜಯಶಂಕರ್ ಇದ್ದರು.

# ನಾಳೆ ಬಾಳ್ಳುಪೇಟೆಯಲ್ಲಿ ಉಚಿತ ಆರೋಗ್ಯ ಶಿಬಿರ

## ಶಿಬಿರದ ಪ್ರಯೋಜನಕ್ಕೆ ಮನವಿ

• ಪ್ರಜೋದಯ ವರದಿ

**ಸಕಲೇಶಪುರ:** ಕಾರ್ಮಿಕ ದಿನಾಚರಣೆ ಅಂಗವಾಗಿ ಮೇ 1 ರಂದು ಬಾಳ್ಳುಪೇಟೆಯ ಶ್ರೀ ಕೆಂಚಮ್ಮ ಮಲ್ಲೇಗೌಡ ಸಮುದಾಯ ಭವನದಲ್ಲಿ ಉಚಿತ ಆರೋಗ್ಯ ಶಿಬಿರವನ್ನು ಆಯೋಜಿಸಲಾಗಿದೆ ಎಂದು ಸಾಮಾಜಿಕ ಹೋರಾಟಗಾರ ಯಡೇಹಳ್ಳಿ ಮಂಜುನಾಥ್ ಅವರು ಹೇಳಿದರು

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ದೊಡ್ಡದೀಣೆ ಜಯಪ್ರಕಾಶ್ ಕೆ.ಎಲ್. ಅವರ ನೇತೃತ್ವದಲ್ಲಿ ಮಂಗಳೂರಿನ ಫಾದರ್ ಮುಲ್ಲರ್ ಆಸ್ಪತ್ರೆಯ ಸಂಯುಕ್ತಾಶ್ರಯದಲ್ಲಿ ಈ ಶಿಬಿರ ನಡೆಯಲಿದೆ. ಜಿಲ್ಲೆಗೆ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಪ್ರಥಮ ಸ್ಥಾನ ಪಡೆದಿರುವ ಡಾ.ಲಕ್ಷ್ಮಣ್ ಗಂಗಾ ಅವರು ವೈದ್ಯಕೀಯ ಕ್ಷೇತ್ರವನ್ನು ಆರಿಸಿಕೊಂಡು ಪ್ರಸ್ತುತ ಫಾದರ್ ಮುಲ್ಲರ್ ಆಸ್ಪತ್ರೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಸಕಲೇಶಪುರ ಭಾಗದ ಅನೇಕರು ಚಿಕಿತ್ಸೆಗಾಗಿ ಮಂಗಳೂರಿಗೆ ತೆರಳುತ್ತಿರುವುದರಿಂದ, ಸ್ಥಳೀಯ ವಾಗಿ ಜನರಿಗೆ ಅನುಕೂಲವಾಗಲೆಂದು ಈ ಉಚಿತ ಆರೋಗ್ಯ ಶಿಬಿರವನ್ನು ಆಯೋಜಿಸಲಾಗಿದೆ ಎಂದು ಹೇಳಿದರು.




ಶಿಬಿರ'ದ'ಲ್ಲಿ ಭಾಗವಹಿಸುವವರು ರಿಫರೆನ್ಸ್ ಕಾರ್ಡ್‌ಗೆ ನೋಂದಣಿ ಮಾಡಿಕೊಂಡಲ್ಲಿ, ಸ್ಥಳದಲ್ಲೇ ಕಾರ್ಡ್ ನೀಡಲಾಗುತ್ತದೆ. ಇದರ ಮೂಲಕ ಅಗತ್ಯವಿರುವವರಿಗೆ 75% ರವರೆಗೆ ರಿಯಾಯಿತಿ ಹಾಗೂ ಕೆಲವು ಚಿಕಿತ್ಸೆಗೆ 50% ರಿಯಾಯಿತಿ ಸಿಗಲಿದೆ. ಶಿಬಿರವು ಬೆಳಿಗ್ಗೆ 9.00 ರಿಂದ ಮಧ್ಯಾಹ್ನ 1.00 ಗಂಟೆಯವರೆಗೆ ನಡೆಯಲಿದೆ. ಇದರ ಸದುಪಯೋಗವನ್ನು ಹೆಚ್ಚಿನ ಸಂಖ್ಯೆಯಲ್ಲಿ ಸಾರ್ವಜನಿಕರು ಪಡೆದುಕೊಳ್ಳಲಿ ಎಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ದೊಡ್ಡದೀಣೆ ಜಯಪ್ರಕಾಶ್ ಕೆ.ಎಲ್. ಮಾತನಾಡಿ, ಮಕ್ಕಳ ರೋಗ, ಪ್ರಸೂತಿ, ಮೂಳೆ, ನೇತ್ರ, ಚರ್ಮ ಸೇರಿದಂತೆ ವಿವಿಧ ವಿಭಾಗಗಳ ತಜ್ಞ ವೈದ್ಯರು ಭಾಗವಹಿಸಲಿದ್ದಾರೆ. ಶಿಬಿರದಲ್ಲಿ ರಕ್ತದ ಒತ್ತಡ ಮಾಪನ, ಮಧುಮೇಹ ಪರೀಕ್ಷೆ, ಆಯ್ದ ಔಷಧಿಗಳ ಉಚಿತ ವಿತರಣೆ, ಉನ್ನತ ಚಿಕಿತ್ಸೆಗೆ ರಿಯಾಯಿತಿ ದರದಲ್ಲಿ ಶಿಫಾರಸ್ಸು ಪತ್ರ, ಸಾರ್ವಜನಿಕರು ಈ ಉಚಿತ ಆರೋಗ್ಯ ಶಿಬಿರದ ಸದುಪಯೋಗವನ್ನು ಪಡೆದುಕೊಳ್ಳಿ ಎಂದು ಹೇಳಿದರು.


**ಜಿಲ್ಲಾಧಿಕಾರಿಗಳವರ ತಾಂತ್ರಿಕ ಸಹಾಯಕರು ಹಾಗೂ ಭೂ ದಾಖಲೆಗಳ ಉಪ ನಿರ್ದೇಶಕರವರ ನ್ಯಾಯಾಲಯ, ಹಾಸನ.**

ಅಪೀಲು ಸಂಖ್ಯೆ: 93/2026

ಅಪೀಲುದಾರರು : ಟಾಕೂಬ್ ಬಿನ್ ಇನಾಸಪ್ಪ

ವಿರುದ್ಧ

ರೆಸ್ಪಾಂಡೆಂಟರು :
1) ಪೌಲೀನ್ ಮರಿಯಪ್ಪ ಮತ್ತು ಇತರರು
10) ರಾಜಪ್ಪ, ವಯಸ್ಕರು.
11) ಲೂಯಿಸ್ ಮೇರಿ, ವಯಸ್ಕರು.
14) ಮೇರಿ ನಿರ್ಮಲಕುಮಾರ್ ಕೋಂ ನಿರ್ಮಲಕುಮಾರ್, ವಯಸ್ಕರು.
22) ರಾಯಪ್ಪ ಬಿನ್ ಮೈ. ಗಾ. ತಾಯಿ ಅಮ್ರೋಜಮ್ಮ, ವಯಸ್ಕರು.
25) ಆರ್.ಜೋಸೆಫ್ ಮೇರಿ ಬಿನ್ ರಾಜಪ್ಪ, ವಯಸ್ಕರು.
25) ರೀತಮ್ಮ ಕೋಂ ಬೆರ್ನಾಡ್, ವಯಸ್ಕರು.
31) ಕಿರಿಟಪ್ಪ ಬಿನ್ ಚೌರಪ್ಪ, ವಯಸ್ಕರು.
32) ರಾಜೇಂದ್ರಕುಮಾರ್ ಬಿನ್ ಶಾಂತಪ್ಪ, ವಯಸ್ಕರು.
33) ನಕ್ಷತ್ರ ಮೇರಿ ಕೋಂ ಶಾಂತಪ್ಪ, ವಯಸ್ಕರು.
34) ಫಿಲೋಮಿನಾ ಕೋಂ ಮರಿಯಪ್ಪ, ವಯಸ್ಕರು.
36) ಜೀವನ್‌ಕುಮಾರ್ ಬಿನ್ ಥಾಮಸಪ್ಪ ಎಂ.ದಾಸಾಪುರ ಗ್ರಾಮ, ನುಗ್ಗೇಹಳ್ಳಿ ಹೋಬಳಿ.

ಎಲ್ಲರೂ ಎಂ.ದಾಸಾಪುರ ಗ್ರಾಮ, ನುಗ್ಗೇಹಳ್ಳಿ ಹೋಬಳಿ, ಚನ್ನರಾಯಪಟ್ಟಣ ತಾಲ್ಲೂಕು.

**ಪತ್ರಿಕಾ ಪ್ರಕಟಣೆ**

ಮೇಲ್ಕಂಡ ಕೇಸನ್ನು ಅಪೀಲುದಾರರು ರೆಸ್ಪಾಂಡೆಂಟರುಗಳ ಮೇಲೆ, ಚನ್ನರಾಯಪಟ್ಟಣ ತಾಲ್ಲೂಕು, ನುಗ್ಗೇಹಳ್ಳಿ ಹೋಬಳಿ ಎಂ.ದಾಸಾಪುರ ಗ್ರಾಮದ ಸರ್ವೆ ನಂ.16/ ರಲ್ಲಿ 16/01ರಿಂದ 16/19, 16/10 ರಲ್ಲಿನ 16/20, 16/21, 16/22, 16/23, 13/24, 16/25, 16/26, 16/27, 16/28, 16/29, 16/30, 16/31, 156/32, 16/33, 16/34, 16/35 ರವರೆಗೆ ಆಗಿರುವ ಪೋಡುಗಳು ವ್ಯತ್ಯಾಸವಾಗಿರುವುದಕ್ಕೆ ಸಂಬಂಧಿಸಿದಂತೆ ಸದರಿ ಪೋಡುಗಳನ್ನು ರದ್ದುಪಡಿಸಲು ಕೋರಿ ಘನ ನ್ಯಾಯಾಲಯದಲ್ಲಿ ಅಪೀಲು ದಾಖಲಿಸಿದ್ದು, ಸದರಿ ಅಪೀಲಿನಲ್ಲಿ 10, 11, 14, 22, 25, 31, 32, 33, 34, 35, 36 ನೇ ರೆಸ್ಪಾಂಡೆಂಟರುಗಳಿಗೆ ಘನ ನ್ಯಾಯಾಲಯದಿಂದ ನೋಂದಾಯಿತ ಅಂಚೆ ಮೂಲಕ ನೋಟೀಸ್ ಕಳುಹಿಸಿದ್ದು, ಸದರಿ ನೋಟೀಸ್ ಸದರಿಯವರುಗಳು ನೋಟೀಸ್ ಪಡೆದಿರುವುದಿಲ್ಲ./ ಜಾರಿಯಾಗಿರುವುದಿಲ್ಲ. ಆದ ಕಾರಣ ಮೇಲ್ಕಂಡ ಅಪೀಲಿನ 10, 11, 14, 22, 25, 31, 32, 33, 34, 35, 36 ನೇ ರೆಸ್ಪಾಂಡೆಂಟರುಗಳಾದ ನಿಮಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಮೇಲ್ಕಂಡ ಅಪೀಲು ದಿನಾಂಕ: 30-04-2026 ರಂದು ಹಿಯರಿಂಗ್ ಇರುತ್ತೆ. ಆ ದಿನದಂದು ಮೇಲ್ಕಂಡ 10, 11, 14, 22, 25, 31, 32, 33, 34, 35, 36 ನೇ ರೆಸ್ಪಾಂಡೆಂಟರುಗಳಿಗೆ ಮಧ್ಯಾಹ್ನ 3-00 ಗಂಟೆಗೆ ಹಾಜರಾಗತಕ್ಕದ್ದು. ಒಂದು ವೇಳೆ ಇದಕ್ಕೆ ತಪ್ಪಿದಲ್ಲಿ ನಿಮ್ಮ ಗೈರು ಹಾಜರಿಯಲ್ಲಿ ಮೇಲ್ಕಂಡ ಅಪೀಲಿನ ನಡವಳಿಕೆಗಳು ನಡೆಯುತ್ತವೆಂದು ತಿಳಿಯುವುದು.

ಘನ ನ್ಯಾಯಾಲಯದ ಮೊಹರಿನೊಂದಿಗೆ ನಾನು ನನ್ನ ದಸ್ಕತ್ತನ್ನು ಹಾಕಿರುತ್ತೇನೆ.

ಅಪೀಲುದಾರರ ಪರ ವಕೀಲರು
ಹಾಸನ
ದಿನಾಂಕ: 27/04/2026

ಭೂ ದಾಖಲೆಗಳ ಉಪ ನಿರ್ದೇಶಕರವರ ನ್ಯಾಯಾಲಯ, ಹಾಸನ ಜಿಲ್ಲೆ, ಹಾಸನ.


## ಕಲ್ಯಾಣಿ-ಸನ್ಯಾಸಿಹಳ್ಳಿವರೆಗಿನ 2 ಕೋಟಿ 15 ಲಕ್ಷ ರೂ.ಗಳ ರಸ್ತೆ ಕಾಮಗಾರಿಗೆ ಶಾಸಕ ಸುರೇಶ್ ಚಾಲನೆ

# ತಾತ್ಕಾಲಿಕ ದುರಸ್ತಿ ಬದಲು ಶಾಶ್ವತ ಪರಿಹಾರವೇ ಗುರಿ

• ಪ್ರಜೋದಯ ವರದಿ

**ಬೇಲೂರು:** ವಾಹನಗಳ ಸವಾರರು ಹಾಗೂ ಸಾರ್ವಜನಿಕರ ಅನುಕೂಲಕ್ಕಾಗಿ ಕೆಂಪೇಗೌಡ ವೃತ್ತದಿಂದ ವಿಷ್ಣು ಸಮುದ್ರದವರೆಗೆ ರಸ್ತೆ ಕಾಮಗಾರಿ ಚಾಲನೆಯಲ್ಲಿದ್ದು, ಮುಂದಕ್ಕೆ ಕಲ್ಯಾಣಿಯಿಂದ ಸನ್ಯಾಸಿಹಳ್ಳಿವರೆಗಿನ ರಸ್ತೆ 2 ಕೋಟಿ 15 ಲಕ್ಷ ರೂ.ಗಳಲ್ಲಿ ಕಾಮಗಾರಿ ಮಾಡಿಸಲಾಗುತ್ತಿದೆ ಎಂದು ಶಾಸಕ ಹೆಚ್.ಕೆ.ಸುರೇಶ್ ಅವರು ಹೇಳಿದರು.

ಪಟ್ಟಣ ಸಮೀಪದ ಸನ್ಯಾಸಿಹಳ್ಳಿ ಗ್ರಾಮದಲ್ಲಿ ಹೆಚ್ಚುವರಿ ರಸ್ತೆ ಕಾಮಗಾರಿಗೆ ಬುಧವಾರ ಭೂಮಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ಈಗಾಗಲೇ ರಸ್ತೆ ಕಾಮಗಾರಿ ಪ್ರಗತಿಯಲ್ಲಿದ್ದು, ಕೆಲವು ಸಣ್ಣ ಸಮಸ್ಯೆಗಳ ಕಾರಣದಿಂದ ಸ್ವಲ್ಪ ಮಟ್ಟಿಗೆ ವಿಳಂಬವಾಗಿದೆ. ಸುಮಾರು ಒಂದೂವರೆ ಕಿ.ಮೀ. ರಸ್ತೆ ಸಂಪೂರ್ಣ ಹಾಳಾಗಿ ಸಾರ್ವಜನಿಕರಿಗೆ ತೀವ್ರ ತೊಂದರೆ ಉಂಟಾಗುತ್ತಿದೆ. ತಾತ್ಕಾಲಿಕ ಪ್ಯಾಚ್ ವರ್ಕ್ ಫಲಕಾರಿಯಾಗದ ಹಿನ್ನಲೆ, ಶಾಸಕರ ಅನುದಾನದಲ್ಲಿ 2 ಕೋಟಿ 15 ಲಕ್ಷ ರೂ. ವೆಚ್ಚದಲ್ಲಿ ಸಂಪೂರ್ಣ ರೀಸರ್ಫೇಸ್ ಕಾಮಗಾರಿಯನ್ನು ಕೈಗೊಳ್ಳಲಾಗುತ್ತಿದೆ ಎಂದು ಮಾಹಿತಿ ನೀಡಿದರು.

ಈ ರಸ್ತೆ ಅಭಿವೃದ್ಧಿಯಿಂದ ಬೇಲೂರು ತಾಲ್ಲೂಕಿನಷ್ಟೇ ಅಲ್ಲದೆ ಮದ್ದೂರು, ಸಕಲೇಶಪುರ ಸೇರಿದಂತೆ ಪಕ್ಕದ ತಾಲ್ಲೂಕುಗಳು ಹಾಗೂ ಜಿಲ್ಲೆಗಳಿಗೂ ಸಂಪರ್ಕ ಸುಗಮವಾಗಲಿದೆ. ಪ್ರವಾಸಿ ತಾಣಗಳಿಗೆ ಸಂಪರ್ಕ ಕಲ್ಪಿಸುವ ಈ ಮಾರ್ಗವು ಗೆಂಡೇಹಳ್ಳಿ ಮತ್ತು ಚೀಕನಹಳ್ಳಿ ರಸ್ತೆಗಳ ಮೂಲಕ ಪ್ರಮುಖ ಮಾರ್ಗವಾಗಿದ್ದು, ಪ್ರವಾಸೋದ್ಯಮಕ್ಕೂ ಉತ್ತೇಜನ ಸಿಗಲಿದೆ ಎಂದು ತಿಳಿಸಿದರು.

ತಾತ್ಕಾಲಿಕ ದುರಸ್ತಿ ಬದಲು ಶಾಶ್ವತ ಪರಿಹಾರವೇ ಗುರಿಯಾಗಿದ್ದು, 1015 ವರ್ಷಗಳ ಕಾಲ ಬಾಳಿಕೆ ಬರುವಂತೆ ಗುಣಮಟ್ಟದ ರಸ್ತೆ ನಿರ್ಮಾಣಕ್ಕೆ ಆದ್ಯತೆ ನೀಡಲಾಗಿದೆ. ಈಗಾಗಲೇ ಈ ಮಾರ್ಗಕ್ಕೆ ₹3.40 ಕೋಟಿ ಸೇರಿದಂತೆ ಒಟ್ಟು ₹5.55 ಕೋಟಿ ಅನುದಾನ ಮೀಸಲಿರಿಸಲಾಗಿದ್ದು, ಹಂತ ಹಂತವಾಗಿ ಅಭಿವೃದ್ಧಿ ಕಾರ್ಯ ಮುಂದುವರಿಯಲಿದೆ ಎಂದು ಹೇಳಿದರು.



ರಸ್ತೆ ಅಗಲೀಕರಣಕ್ಕೂ ಯೋಜನೆ ರೂಪಿಸಲಾಗಿದ್ದು, ಅರಣ್ಯ ಇಲಾಖೆಯ ಅನುಮತಿ ಪಡೆದು ಮರ ತೆರವು ಕಾರ್ಯ ಪೂರ್ಣಗೊಂಡ ನಂತರವೇ ಕಾಮಗಾರಿ ಆರಂಭಿಸಲಾಗುವುದು. ಮರ ತೆರವುಗೊಳಿಸುವುದಕ್ಕೂ ಮುನ್ನ ಯಾವುದೇ ರೀತಿಯ ರಸ್ತೆ ನಿರ್ಮಾಣ ಕೈಗೊಳ್ಳುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ಗ್ರಾಮಸ್ಥ ರಾಜಣ್ಣ ಮಾತನಾಡಿ, ಈ ಭಾಗದ ರಸ್ತೆಯ ದುಸ್ಥಿತಿ ಬಗ್ಗೆ ಹಲವು ವರ್ಷಗಳಿಂದ ಜನರು ಸಂಕಷ್ಟ ಅನುಭವಿಸುತ್ತಿದ್ದೇವೆ. ಕೆಂಪೇಗೌಡ ವೃತ್ತದಿಂದ ಬಿಷ್ಟಮ್ಮನ ಕೆರೆವರೆಗೆ ಇರುವ ರಸ್ತೆ ಸಂಪೂರ್ಣ ಹಾಳಾಗಿ, ಸಂಚಾರಕ್ಕೆ ಅಸಾಧ್ಯವಾದ ಸ್ಥಿತಿ ನಿರ್ಮಾಣವಾಗಿತ್ತು. ದಿನನಿತ್ಯ ಶಾಲಾ ಮಕ್ಕಳು, ರೈತರು ಹಾಗೂ ಸಾರ್ವಜನಿಕರು ತೀವ್ರ ತೊಂದರೆ ಅನುಭವಿಸುತ್ತಿದ್ದರು. ತಾತ್ಕಾಲಿಕ ಪ್ಯಾಚ್ ವರ್ಕ್ ಮಾಡಿದರೂ ಯಾವುದೇ ಶಾಶ್ವತ ಪರಿಹಾರ ಸಿಗಲಿಲ್ಲ ಎಂದು ಅವರು ತಿಳಿಸಿದರು.

ಈಗ ಶಾಸಕರ ಅನುದಾನದಲ್ಲಿ 2.15 ಕೋಟಿ ರೂ. ವೆಚ್ಚದಲ್ಲಿ ರೀಸರ್ಫೇಸ್ ಕಾಮಗಾರಿ ಕೈಗೊಳ್ಳಲಾಗುತ್ತಿರುವುದು ಸಂತಸದ ವಿಷಯ. ಈ ರಸ್ತೆ ಅಭಿವೃದ್ಧಿಯಾದರೆ ನಮ್ಮ ಗ್ರಾಮಕ್ಕೆ ಮಾತ್ರವಲ್ಲದೆ ಸುತ್ತಮುತ್ತಲಿನ ಗ್ರಾಮಗಳು ಹಾಗೂ ತಾಲ್ಲೂಕುಗಳಿಗೆ ಸಹ ಅನುಕೂಲವಾಗಲಿದೆ ಎಂದರು.

ಪ್ರವಾಸಿಗರ ಸಂಚಾರಕ್ಕೂ ಈ ಮಾರ್ಗ ಪ್ರಮುಖವಾಗಿದ್ದು, ರಸ್ತೆ ಉತ್ತಮಗೊಂಡರೆ ಸ್ಥಳೀಯ ಆರ್ಥಿಕ ಚಟುವಟಿಕೆಗಳಿಗೂ ಉತ್ತೇಜನ ಸಿಗಲಿದೆ. ಈ ಕಾಮಗಾರಿ ಶಾಶ್ವತವಾಗಿ ಗುಣಮಟ್ಟದ ರೀತಿಯಲ್ಲಿ ನಡೆಯಬೇಕು ಎಂದು ಅವರು ಆಗ್ರಹಿಸಿದರಲ್ಲದೆ, ಶಾಸಕ ಹೆಚ್.ಕೆ.ಸುರೇಶ್ ಅವರ ಪ್ರಯತ್ನದಿಂದ ಈ ಯೋಜನೆ ಸಾಧ್ಯವಾಗಿದ್ದು, ಗ್ರಾಮಸ್ಥರ ಪರವಾಗಿ ಕೃತಜ್ಞತೆ ಸಲ್ಲಿಸುತ್ತೇವೆ ಎಂದು ಅವರು ಹೇಳಿದರು.

ಈ ಸಂದರ್ಭದಲ್ಲಿ ಪುರಸಭೆ ಸಧಸ್ಯ ಎ.ಆರ್.ಅಶೋಕ್, ವಸಂತ್, ಗ್ರಾ.ಪಂ. ಮಾಜಿ ಸದಸ್ಯ ರಮೇಶ್, ದಾಸ್, ಪಿಡಿಒ ಸರಸ್ವತಿ, ಗೋಪಾಲ್, ಯಲ್ಲೇಶ್, ತಾರಾನಾಥ್ ಸೇರಿದಂತೆ ಇನ್ನಿತರರು ಹಾಜರಿದ್ದರು

# ಮಲೆನಾಡು ತಾಂತ್ರಿಕ ಶಿಕ್ಷಣ ಸಮಿತಿ ಹಗ್ಗಾಜಗ್ಗಾಟಕ್ಕೆ ತೆರೆ

» ಮೊದಲನೇ ಪುಟದಿಂದ

ಪಾರದರ್ಶಕವಾಗಿ ಪರಿಶೀಲಿಸಿದರು. ಈ ವೇಳೆ ಅಶೋಕ್ ಹಾರನಹಳ್ಳಿ ಅವರ ತಂಡಕ್ಕೆ 14 ಸದಸ್ಯರ ಬೆಂಬಲ ದೊರೆತಿದ್ದು, ಆರ್.ಟಿ.ದ್ಯಾವೇಗೌಡ ಅವರ ತಂಡಕ್ಕೆ 10 ಸದಸ್ಯರ ಬೆಂಬಲ ಮಾತ್ರ ಸಿಕ್ಕಿತ್ತು. ಈ ವರದಿಯನ್ನೇ ನ್ಯಾಯಾಲಯ ತನ್ನ ಅಂತಿಮ ತೀರ್ಪಿನ ಆಧಾರವನ್ನಾಗಿ ಮಾಡಿಕೊಂಡಿದೆ.

**ಸರಳ ಬಹುಮತವೇ ಮಾನ್ಯ**

ವಿಚಾರಣೆಯ ವೇಳೆ ಆರ್.ದ್ಯಾವೇಗೌಡ ಅವರ ಬಣವು ಸಮಿತಿಯ ಉಪವಿಧಿಗಳ ಪ್ರಕಾರ ಅವಿಶ್ವಾಸ ನಿರ್ಣಯ ಅಂಗೀಕಾರಕ್ಕೆ ಎರಡು ಮೂರರಷ್ಟು (2/3) ಬಹುಮತ ಅಗತ್ಯವಿದೆ ಎಂದು ವಾದಿಸಿತು. ಆದರೆ, ಈ ವಾದವನ್ನು ಹೈಕೋರ್ಟ್ ತಳ್ಳಿಹಾಕಿ, ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ಸರಳ ಬಹುಮತವೇ ಮಾನ್ಯವೆಂದು ಸ್ಪಷ್ಟಪಡಿಸಿದೆ. ಆಡಳಿತ ಬದಲಾವಣೆಗೆ ಸಂಬಂಧಿಸಿದಂತೆ ಈ ಅಭಿಪ್ರಾಯ ಮಹತ್ವದ ನಿರ್ದೇಶನವೆಂದು ಪರಿಗಣಿಸಲಾಗಿದೆ.

ಪ್ರಕರಣದ ಆರಂಭಿಕ ಹಂತದಲ್ಲಿ ದ್ಯಾವೇಗೌಡ ಬಣವು ಮೂವರು ಸದಸ್ಯರನ್ನು ಅಮಾನತುಗೊಳಿಸಿದ್ದರೂ, ಹಾಸನ ನ್ಯಾಯಾಲಯ ಆ ಆದೇಶಕ್ಕೆ ಮಧ್ಯಂತರ ತಡೆ ನೀಡಿತ್ತು. ಪರಿಣಾಮವಾಗಿ ಅಮಾನತುಗೊಂಡ ಸದಸ್ಯರು ಮತ್ತೆ ಮಂಡಳಿಯ ಚಟುವಟಿಕೆಯಲ್ಲಿ ಭಾಗವಹಿಸಲು ಅವಕಾಶ ಪಡೆದರು. ಅವರು ಅಶೋಕ್ ಹಾರನಹಳ್ಳಿ ಬಣದ ಪರ ನಿಂತಿದ್ದು, ಬಹುಮತದ ಸಮೀಕರಣದಲ್ಲಿ ಮಹತ್ವದ ಪಾತ್ರವಹಿಸಿದೆ.

**ಶೀಘ್ರದಲ್ಲೇ ಲಿಖಿತ ಆದೇಶ**

ನ್ಯಾಯಾಲಯವು ಬಿ.ಆರ್.ಗುರುದೇವ್ ಅವರನ್ನು ಅಧ್ಯಕ್ಷರಾಗಿ, ಜಿ.ಟಿ.ಕುಮಾರ್ ಅವರನ್ನು ಕಾರ್ಯದರ್ಶಿಯಾಗಿ ಹಾಗು ಎಸ್.ಜಿ.ಶ್ರೀಧರ್ ಅವರನ್ನು ಖಜಾಂಚಿಯಾಗಿ ಕಾರ್ಯ ನಿರ್ವಹಿಸಲು ಅನುಮತಿ ನೀಡಿದೆ. ಈ ಕುರಿತು ವಿವರವಾದ ಲಿಖಿತ ಆದೇಶವನ್ನು ಶೀಘ್ರದಲ್ಲೇ ಪ್ರಕಟಿಸಲಾಗುವುದೆಂದು ಪೀಠ ತಿಳಿಸಿದೆ.

# ಯೋಗೇಶ್‌ಗೌಡ ಕೊಲೆ ಪ್ರಕರಣ: ವಿನಯ ಕುಲಕರ್ಣಿ ಶಾಸಕತ್ವ ರದ್ದು

• ಪ್ರಜೋದಯ ವರದಿ



**ಬೆಂಗಳೂರು:** ಧಾರವಾಡ ಜಿಲ್ಲಾ ಪಂಚಾಯಿತಿ ಕ್ಷೇತ್ರದ ಬಿಜೆಪಿ ಸದಸ್ಯರಾಗಿದ್ದ ಯೋಗೀಶ್‌ಗೌಡ ಕೊಲೆ ಪ್ರಕರಣದಲ್ಲಿ ಜನಪ್ರತಿನಿಧಿ ನ್ಯಾಯಾಲಯದಿಂದ ಶಿಕ್ಷೆಗೆ ಗುರಿಯಾಗಿರುವ ವಿನಯ ಕುಲಕರ್ಣಿ ಶಾಸಕ ಸ್ಥಾನ ಈಗಾಗಲೇ ರದ್ದಾಗಿದೆ ಎಂದು ವಿಧಾನಸಭಾಧ್ಯಕ್ಷ ಯು.ಟಿ.ಖಾದರ್ ಅವರು ತಿಳಿಸಿದರು.

ಸುದ್ದಿಗಾರರ ಜೊತೆ ಬುಧವಾರ ಮಾತನಾಡಿದ ಅವರು, ವಿಧಾನಸಭೆಯ ಯಾವೊಬ್ಬ ಸದಸ್ಯನ ಸದಸ್ಯತ್ವ ರದ್ದು ಮಾಡುವ ಅಧಿಕಾರ ಸಭಾಧ್ಯಕ್ಷರಿಗೆ ಇಲ್ಲ ಎಂದು ಸ್ಪಷ್ಟಪಡಿಸಿದರು. ವಿಧಾನಸಭೆಯೊಳಗೆ ಏನಾದರೂ ಆದಾಗ ಮಾತ್ರ ಅನರ್ಹಗೊಳಿಸುವ ಅಧಿಕಾರ ಇದೆ. ಯಾರಾದರೂ ಶಿಕ್ಷೆಗೆ ಒಳಪಟ್ಟಾಗ ನಿಯಮದ ಪ್ರಕಾರ ಅವರ ಶಾಸಕ ಸ್ಥಾನ ತಾನಾಗಿಯೇ ರದ್ದಾಗುತ್ತದೆ. ಪ್ರಕರಣಕ್ಕೆ ನ್ಯಾಯಾಲಯದಲ್ಲಿ ತಡೆಯಾಜ್ಞೆ ಸಿಕ್ಕರೆ ಮತ್ತೆ ಶಾಸಕ ಸ್ಥಾನ ಮರುಸ್ಥಾಪನೆ ಆಗುತ್ತದೆ ಎಂದರು.

ಈ ಬಗ್ಗೆ ಸದನಕ್ಕೆ ಮಾಹಿತಿ ನೀಡುವುದಷ್ಟೇ ನನ್ನ ಜವಾಬ್ದಾರಿ. ವಿಧಾಸಭೆಯ ಕಾರ್ಯದರ್ಶಿಗೆ ಪರಿಶೀಲನೆ ಮಾಡಲು ಹೇಳಿದ್ದೇನೆ. ವಿನಯ ಕುಲಕರ್ಣಿ ವಿಷಯದಲ್ಲಿ ಕ್ರಮ ತೆಗೆದುಕೊಳ್ಳಲು ವಿಳಂಬವಾಗುತ್ತಿದೆ ಎನ್ನುವುದು ವಿಷಯವೇ ಇಲ್ಲ ಎಂದರು. ಶಾಸಕ ಸ್ಥಾನದಿಂದ ಅನರ್ಹಗೊಳಿಸುವ ವಿಚಾರವಾಗಿ ಬಿಜೆಪಿ, ಕಾಂಗ್ರೆಸ್ ಎಂದು ನಾನು ತಾರತಮ್ಯ ಮಾಡಿಲ್ಲ. ತಾರತಮ್ಯ ಮಾಡುವಂಥಹದ್ದು ಏನಿದೆ? ಶಾಸಕ ಸ್ಥಾನ ರದ್ದಾದ ಬಳಿಕ ಅವರು ಸದನಕ್ಕೆ ಬರಲು ಸಾಧ್ಯವಿಲ್ಲ. ಈ ಮಾಹಿತಿ ಇಲ್ಲದೇ ಇರುವವರಿಗೆ ಮಾಹಿತಿ ಕೊಡುತ್ತಿದ್ದೇನೆಂದು ತಿರುಗೇಟು ನೀಡಿದರು.

## ಅರವಿಂದ ಕೇಜ್ರಿವಾಲ್‌ಗೆ ದೆಹಲಿ ಹೈ ಕೋರ್ಟ್ ನೋಟಿಸ್

• ಪ್ರಜೋದಯ ವರದಿ

**ನವದೆಹಲಿ:** ಆಮ್ ಆದ್ಮಿ ಪಕ್ಷದ ಮುಖ್ಯಸ್ಥ ಅರವಿಂದ ಕೇಜ್ರಿವಾಲ್ ಅವರಿಗೆ ದೆಹಲಿ ಹೈ ಕೋರ್ಟ್ ಬುಧವಾರ ಹೊಸದಾಗಿ ನೋಟಿಸ್ ಜಾರಿಗೊಳಿಸಿದೆ.

ಸಮನ್ಸ್ ಪ್ರಕರಣಕ್ಕೆ ಸಂಬಂಧಿಸಿದಂತೆ ವಿಚಾರಣಾ ನ್ಯಾಯಾಲಯವು ಕೇಜ್ರಿವಾಲ್ ಅವರನ್ನು ಖುಲಾಸೆ ಗೊಳಿಸಿದ್ದನ್ನು ಪ್ರಶ್ನಿಸಿ ಜಾರಿ ನಿರ್ದೇಶನಾಲಯ (ಇ.ಡಿ) ಸಲ್ಲಿಸಿರುವ ಅರ್ಜಿಯ ಮೇರೆಗೆ ನ್ಯಾಯಮೂರ್ತಿ ಸ್ವರ್ಣ ಕಾಂತ ಶರ್ಮಾ ಈ ನೋಟಿಸ್ ನೀಡಿದ್ದಾರೆ.

ಅಬಕಾರಿ ನೀತಿ ಹಗರಣಕ್ಕೆ ಸಂಬಂಧಿಸಿ ದಂತೆ ತನಿಖೆಗೆ ಹಾಜರಾಗಲು ಸೂಚಿಸಿ ಇ.ಡಿ ನೀಡಿದ್ದ ಸಮನ್ಸ್ ಅನ್ನು ಕೇಜ್ರಿವಾಲ್ ಉದ್ದೇಶಪೂರ್ವಕವಾಗಿ ಧಿಕ್ಕರಿಸಿದ್ದಾರೆಂದು ಆರೋಪಿಸಿ ಇ.ಡಿ 2 ಪ್ರಕರಣಗಳನ್ನು ದಾಖಲಿಸಿತ್ತು. ಆದರೆ, ವಿಚಾರಣಾ ನ್ಯಾಯಾಲಯವು 2 ಪ್ರಕರಣಗಳಲ್ಲಿ ಕೇಜ್ರಿವಾಲ್ ಅವರನ್ನು ಖುಲಾಸೆಗೊಳಿಸಿದೆ.

## ಇಂದು ಜಯಶ್ರೀ ನರ್ಸಿಂಗ್ ಹೋಂ ಲೋಕಾರ್ಪಣೆ

• ಪ್ರಜೋದಯ ವರದಿ

**ಹಾಸನ:** ನಗರದ ಜಯಶ್ರೀ ನರ್ಸಿಂಗ್ ಹೋಂ ಇದೀಗ ಕೆ.ಆರ್. ಪುರಂ 4ನೇ ಅಡ್ಡ ರಸ್ತೆಯಲ್ಲಿ ನೂತನ ಜಯಶ್ರೀ ಆಸ್ಪತ್ರೆ ನಿರ್ಮಿಸಿದ್ದು, ಗುರುವಾರ ಲೋಕಾರ್ಪಣೆ ಗೊಳ್ಳಲಿದೆ ಎಂದು ಆಸ್ಪತ್ರೆಯ ವ್ಯವಸ್ಥಾಪಕ ನಿರ್ದೇಶಕ ಡಾ.ವೈ.ಎನ್.ಪಟ್ಟಾಭಿ ಅವರು ತಿಳಿಸಿದರು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಆದಿಚುಂಚನಗಿರಿ ಪೀಠಾಧ್ಯಕ್ಷ ಡಾ.ಶ್ರೀ ನಿರ್ಮಲಾ ನಂದನಾಥ ಸ್ವಾಮೀಜಿ, ಶಾಖಾ ಮಠದ ಶ್ರೀ ಶಂಭುನಾಥ ಸ್ವಾಮೀಜಿ ಅವರ ದಿವ್ಯ ಸಾನ್ನಿಧ್ಯದಲ್ಲಿ ಸಂಸದ ಶ್ರೇಯಸ್ ಪಟೇಲ್, ಶಾಸಕ ಹೆಚ್.ಪಿ.ಸ್ವರೂಪ್ ಉದ್ಘಾಟನೆ ನೆರವೇರಿಸುವರು ಎಂದರು.

ಜಯಶ್ರೀ ಆಸ್ಪತ್ರೆಯಲ್ಲಿ ಆಧುನಿಕ ಅತ್ಯುತ್ತಮ ತಂತ್ರಜ್ಞಾನದಿಂದ ಕೂಡಿದ ರೋಗ ಪತ್ತೆ ವಿಧಾನಕ್ಕೆ ಬಳಕೆ ಆಗುವ ನೂತನ ಸ್ವಯಂಚಾಲಿತ ಯಂತ್ರಗಳನ್ನು ಒಳಗೊಂಡ ಪ್ರಯೋಗಾಲಯ ಸ್ಥಾಪಿಸಲಾಗಿದೆ. ವಿಶೇಷವಾಗಿ ಮಧುಮೇಹ, ಥೈರಾಯಿಡ್ ಹಾಗು ಬಂಜೆತನಕ್ಕೆ ಸಂಬಂಧಪಟ್ಟ ಸಮಸ್ಯೆಗಳ ಪರಿಹಾರಕ್ಕಾಗಿ ಪ್ರಥಮವಾಗಿ ಕನ್ಸಲ್ಟೆಂಟ್ ಎಂಡೋಕ್ರಿನೋಜಿಸ್ಟ್ ಲಭ್ಯವಿರುತ್ತಾರೆ ಎಂದರು.

ಆಸ್ಪತ್ರೆಯ ಹಿರಿಯ ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞರಾದ ಡಾ||ಹೇಮಲತಾ ಅವರು ಮಾತನಾಡಿ, ಇತರೆ ಸೂಪರ್ ಸ್ಪೆಷಾಲಿಟಿಗಳಾದ ಸರ್ಜಿಕಲ್ ಗ್ಯಾಸ್ಟ್ರೋ ಎಂಟೆರೊಲೊಜಿ, ನ್ಯೂರೋ ಸರ್ಜರಿ, ನವಜಾತ ಶಿಶು ಆರೈಕೆ, ಮಕ್ಕಳ ಬೆಳವಣಿಗೆ ಮತ್ತು ನರವಿಜ್ಞಾನ, ತೀವ್ರ ಅಸ್ವಸ್ಥ ಆರೈಕೆ ವಿಭಾಗಗಳಲ್ಲಿ ನುರಿತ, ಹಿರಿಯ ತಜ್ಞ ವೈದ್ಯರು, ಶಸ್ತ್ರಚಿಕಿತ್ಸಕರ ಸೇವೆ ಲಭ್ಯವಿರುತ್ತದೆ ಎಂದು ತಿಳಿಸಿದರು.

ಆ್ಯಂಬುಲೆನ್ಸ್ ಫಿಜಿಯೋಥೆರಫಿ ಸಹ ಲಭ್ಯವಿದೆ. ಹೊಸ ಆಸ್ಪತ್ರೆಯಲ್ಲಿ ತೀವ್ರ ನಿಗಾ ಘಟಕ, ಮಕ್ಕಳ ನಿಗಾ ಘಟಕ ಸೇರಿ 60 ಹಾಸಿಗಳಿವೆ ಎಂದರು. ಡಾ||ಗಾನವಿ, ಡಾ||ಲಿಂಗರಾಜು, ಡಾ||ಪ್ರತಿಭಾ, ಡಾ||ಸುಭಾಷ್ ಇದ್ದರು.

# ಬಿರುಗಾಳಿ-ಮಳೆ ಅಬ್ಬರ: ಜಿಲ್ಲೆಯಲ್ಲಿ ಅವಾಂತರ




» ಮೊದಲನೇ ಪುಟದಿಂದ

ಕಣತೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಜೆ.ತಿಮ್ಮನಹಳ್ಳಿ, ಮಡಬಲು, ತಾಳೂರು, ಮುರುಡೂರು, ಕಾಮತಿ, ನಾಕಲಗೂಡು, ಬೆಳ್ಳೂರು, ಕಾರ್ಜುವಳ್ಳಿ ಕೂಡಿಗೆ, ಹಳುವಳ್ಳಿ ಕಾಲೋನಿ, ಬೆಳ್ಳಾವರ, ಲಿಂಗರಾಜಪುರ, ಲಕ್ಷ್ಮೀಪುರ ಸೇರಿ ಸುತ್ತಮುತ್ತಲಿನ ಅನೇಕ ಗ್ರಾಮಗಳಲ್ಲಿ ಬಿರುಗಾಳಿಯ ಅಬ್ಬರದಿಂದ 3 ವಿದ್ಯುತ್ ಪರಿವರ್ತಕ ಕಂಬಗಳು ಸೇರಿ ಅನೇಕ ಮರಗಳು ಧರೆಗುರುಳಿವೆ.

ವಿದ್ಯುತ್ ವ್ಯತ್ಯಯ ಉಂಟಾದ ಹಿನ್ನಲೆ ಸೆಸ್ಕ್ ಇಲಾಖೆ ಸಿಬ್ಬಂದಿ ದುರಸ್ತಿ ಕಾರ್ಯ ಕೈಗೊಂಡು ಬಹುತೇಕ ಗ್ರಾಮಗಳಿಗೆ ಬುಧವಾರ ವಿದ್ಯುತ್ ಸರಬರಾಜು ಮಾಡಿದ್ದಾರೆ. ಇನ್ನೂ ಜೆ.ತಿಮ್ಮನಹಳ್ಳಿ ಗ್ರಾಮದಲ್ಲಿ ಮುರಿದು ಬಿದ್ದ ಕಂಬಗಳನ್ನು ಬದಲಾಯಿಸಿ ಹೊಸ ಕಂಬಗಳನ್ನು ಅಳವಡಿಸಿದ ನಂತರ ವಿದ್ಯುತ್ ಸಂಪರ್ಕ ಕಲ್ಪಿಸಲಾಗುವುದೆಂದು ಜೂನಿಯರ್ ಇಂಜಿನೀಯರ್ ಕುಮಾರ್ ತಿಳಿಸಿದ್ದಾರೆ.

ಆಲೂರು ಕಸಬಾ ಹೋಬಳಿಯಲ್ಲಿ 15 ಮಿ.ಮೀ. ಮಳೆಯಾಗಿದೆ. ಪಾಳ್ಯ, ಕುಂದೂರು ಮತ್ತು ಕೆ. ಹೊಸಕೋಟೆ ಹೋಬಳಿಗಳಲ್ಲಿ ತುಂತುರು ಮಳೆಯಾಗಿದೆ. ಕಸಬಾ ಭಾಗದಲ್ಲಿ ಮಾತ್ರ ಬಿರುಗಾಳಿಯೊಂದಿಗೆ ಹೆಚ್ಚಿನ ಮಳೆಯಾದ ವರದಿಯಾಗಿದೆ.

**ಮಳೆ ವಿವರ**

ಹಾಸನ ನಗರದಲ್ಲಿ ಗರಿಷ್ಠ 1 ಇಂಚಿಗೂ ಹೆಚ್ಚಿನ ಗರಿಷ್ಠ ಮಳೆಯಾಗಿದೆ. ಉಳಿದಂತೆ ಅರಸೀಕೆರೆ ನಗರದಲ್ಲಿ 1 ಇಂಚು, ಗಂಡಸಿ ಮುಕ್ಕಾಲು ಇಂಚು, ಬಾಣಾವರ ಅರ್ಧ ಇಂಚು, ಕಣಕಟ್ಟೆ, ಬೇಲೂರು, ಅರೇಹಳ್ಳಿ,ಸಕಲೇಶಪುರ, ಬೆಳಗೋಡು, ಹೆತ್ತೂರು ಭಾಗದಲ್ಲೂ ಅರ್ಧ ಇಂಚಿಗೂ ಹೆಚ್ಚಿನ ಮಳೆಯಾಗಿದೆ.

## ಯುವಕನ ಕೊಲೆ: ತನಿಖೆಗೆ ನಿರ್ಲಕ್ಷ್ಯ ಆರೋಪ




• ಪ್ರಜೋದಯ ವರದಿ

**ಹಾಸನ:** ಅನುಮಾನಾಸ್ಪದವಾಗಿ ಕೊಲೆಯಾದ ಸಕಲೇಶಪುರ ತಾಲ್ಲೂಕು ಮಠ ಸಾಗರ ಕೃಷ್ಣಾಪುರ ಗ್ರಾಮದ ಜೀವನ್ ಕುಮಾರ್ ಪ್ರಕರಣವನ್ನು ಪೊಲೀಸರು ಗಂಭೀರವಾಗಿ ಪರಿಗಣಿಸದೆ ನಿರ್ಲಕ್ಷ್ಯ ವಹಿಸಿದ್ದಾರೆಂದು ಕೊಲೆಯಾದ ಯುವಕನ ತಂದೆ ಶಿವಪ್ಪ ಮತ್ತು ಸಹೋದರಿ ಪ್ರಿಯ ಅವರು ಆರೋಪಿಸಿದರು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಫೆ.2 ರಂದು ಕೊಲ್ಲಹಳ್ಳಿಯಲ್ಲಿ ಜಾತ್ರೆಗೆ ಹೋಗಿದ್ದ ಜೀವನ್ ಕುಮಾರ್, ರಾತ್ರಿಯಾದರೂ ಬಾರದೇ ಇದ್ದಾಗ ಆತಂಕಗೊಂಡು ಕರೆ ಮಾಡಿದಾಗ ಆ ಕಡೆಯಿಂದ ಕರೆ ಸ್ವೀಕರಿಸಿದ ಮೋಹನ್ ಪ್ರೀತಿ ಎಂಬ ಯುವಕ ನಾವು ಮದ್ಯ ಸೇವನೆ ಮಾಡುತ್ತಿದ್ದೇವೆ ನಮಗೆ ಪದೇ ಪದೇ ಕರೆ ಮಾಡಿ ತೊಂದರೆ ಕೊಡಬೇಡಿ ಎಂದ. ಮತ್ತೊಮ್ಮೆ ನಿಮ್ಮ ಹುಡುಗನನ್ನು ದುಬೈಗೆ ಪಾರ್ಸಲ್ ಮಾಡುತ್ತೇವೆ. ಮಣ್ಣಿನ ಅಡಿಗೆ ಕಳಿಸುತ್ತೇವೆಂದು ಹೇಳಿದ್ದಾನೆ. ಮಾರನೆಯ ದಿನ ನಮ್ಮ ತಮ್ಮ ಕೊಲೆಯಾಗಿರುವುದು ಗೊತ್ತಾಗಿದೆ. ಆದರೆ ಹೇಗಾಯಿತು ಎಂಬುದು ಈವರೆಗೂ ತಿಳಿದಿಲ್ಲ ಎಂದು ಸಹೋದರಿ ಕಣ್ಣೀರಿಟ್ಟರು.

ಜೀವನ್ ಜೊತೆ ಇದ್ದ ಮೋಹನ್ ಪ್ರೀತಿ ಮತ್ತು ಭವಿತ್ ಎಂಬುವವರು ಆತ್ಮೀಯ ಸ್ನೇಹಿತ ರಾಗಿದ್ದರು. ಆದರೂ ಯಾವ ಕಾರಣಕ್ಕೆ ತಮ್ಮನನ್ನು ಕೊಲೆ ಮಾಡಿದರು ಎಂಬುದು ನಿಗೂಢ ವಾಗಿಯೇ ಇದೆ. ಸಕಲೇಶಪುರ ನಗರ ಠಾಣೆ ಪೊಲೀಸರಿಗೆ ದೂರು ನೀಡಿದ್ದರೂ ಅವರು ಸರಿಯಾಗಿ ತನಿಖೆ ನಡೆಸುತ್ತಿಲ್ಲ. ಕೇಳಲು ಹೋದರೆ ಸಾಗು ಹಾಕುವ ಪ್ರಯತ್ನ ಮಾಡುತ್ತಿದ್ದಾರೆ. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಳಿಗೆ ಹೋದರೆ ಡಿವೈಎಸ್ಪಿ ಅವರ ಬಳಿಗೆ ಹೋಗಿ ಎನ್ನುತ್ತಾರೆ, ನಾವು ಸಾಕಷ್ಟು ಅಲೆದಾಡಿದರೂ, ನ್ಯಾಯ ಸಿಕ್ಕಿಲ್ಲ. ಬೈಕ್ ಮಾತ್ರ ಕೊಟ್ಟಿದ್ದಾರೆ. ಇನ್ನಾದರೂ ನಮಗೆ ನ್ಯಾಯ ಕೊಡಿಸದಿದ್ದರೆ ನಾವೂ ಸಾಯುತ್ತೇವೆಂದು ಎಚ್ಚರಿಕೆ ನೀಡಿದರು.

## ರಿಕೆಲ್ಟನ್ ಶತಕ: ರೈಸರ್ಸ್‌ಗೆ 244 ರನ್ ಗುರಿ



• ಪ್ರಜೋದಯ ವರದಿ

**ಮುಂಬೈ:** ರಿಯಾನ್ ರಿಕೆಲ್ಟನ್ ಸಿಡಿಸಿದ ಅಮೋಘ ಶತಕದ ಬಲದಿಂದ ಆತಿಥೇಯ ಮುಂಬೈ ಇಂಡಿಯನ್ಸ್ ತಂಡವು ಸನ್‌ರೈಸರ್ಸ್ ಹೈದರಾಬಾದ್‌ಗೆ 244 ರನ್‌ಗಳ ಬೃಹತ್ ಗುರಿಯೊಡ್ಡಿದೆ.

ಟಾಸ್ ಗೆದ್ದು ಬ್ಯಾಟಿಂಗ್ ಆಯ್ದುಕೊಂಡ ಮುಂಬೈಗೆ ಆರಂಭಿಕ ವಿಲ್ ಜಾಕ್ಸ್ ಮತ್ತು ರಿಯಾನ್ ಅಮೋಘ ಆರಂಭ ನೀಡಿದರು. ಈ ಜೋಡಿ ಮೊದಲ ವಿಕೆಟ್ ಪಾಲುದಾರಿಕೆಯಲ್ಲಿ ಕೇವಲ 7 ಓವರ್‌ಗಳಲ್ಲೇ 93 ರನ್ ಕೂಡಿಸಿತು. 22 ಎಸೆತಗಳಲ್ಲಿ 46 ರನ್ ಗಳಿಸಿದ್ದ ಜಾಕ್ಸ್, 8ನೇ ಓವರ್‌ನ ಮೊದಲ ಎಸೆತದಲ್ಲೇ ಔಟಾದರು. ಬಳಿಕ ಬಂದ ಸೂರ್ಯಕುಮಾರ್ ಯಾದವ್ (5) ಹೆಚ್ಚು ಹೊತ್ತು ನಿಲ್ಲಲಿಲ್ಲ. ನಂತರ ನಮನ್ ಧೀರ್ (22) ಹಾಗೂ ನಾಯಕ ಹಾರ್ದಿಕ್ ಪಾಂಡ್ಯ (31) ಜೊತೆ ತಲಾ ಅರ್ಧಶತಕದ ಜೊತೆಯಾಟವಾಡಿದ ರಿಯಾನ್, ವೈಯಕ್ತಿಕ ಶತಕದ ಸಾಧನೆಯನ್ನೂ ಮಾಡಿದರು.

ಕೊನೆವರಗೂ ವಿಕೆಟ್ ಕೊಡದೆ ಆಡಿದ ರಿಕೆಲ್ಟನ್, 55 ಎಸೆತಗಳಲ್ಲಿ 123 ರನ್ ಗಳಿಸಿ ಅಜೇಯವಾಗಿ ಉಳಿದರು. ಅವರ ಆಟದ ಬಲದಿಂದ ಮುಂಬೈ ಪಡೆ ನಿಗದಿತ 20 ಓವರ್‌ಗಳಲ್ಲಿ 5 ವಿಕೆಟ್‌ಗೆ 243 ರನ್ ಕಲೆಹಾಕಿತು.

ರೈಸರ್ಸ್ ಪರ ಪ್ರಫುಲ್ ಹಿಂಗೆ 2, ಇಶಾನ್ ಮಲಿಂಗ, ಸಕಿಬ್ ಹುಸೈನ್ ಹಾಗೂ ನಿತೀಶ್ ಕುಮಾರ್ ರೆಡ್ಡಿ 1 ವಿಕೆಟ್ ಉರುಳಿಸಿದರು.

## ಮರುಮೌಲ್ಯಮಾಪನ: ಮಿಥುನ್‌ಗೆ 591 ಅಂಕ

• ಪ್ರಜೋದಯ ವರದಿ



**ಹಾಸನ:** ನಗರದ ಸುಜಲ ಪಿಯು ಕಾಲೇಜಿನ ವಿದ್ಯಾರ್ಥಿ ಎಚ್.ಎನ್. ಮಿಥುನ್ ದ್ವಿತೀಯ ಪಿಯುಸಿ ಪರೀಕ್ಷೆ -1ರ ಮರುಮೌಲ್ಯಮಾಪನದಲ್ಲಿ ಗಮನಾರ್ಹ ಸಾಧನೆ ಮಾಡಿದ್ದಾನೆ.

ಭೌತಶಾಸ್ತ್ರದಲ್ಲಿ(ಫಿಸಿಕ್ಸ್)100, ಗಣಿತದಲ್ಲಿ (ಮ್ಯಾಥ್ಸ್)100 ಹಾಗೂ ಜೀವಶಾಸ್ತ್ರದಲ್ಲಿ (ಬಯೋಲಜಿ)100, ರಸಾಯನ ಶಾಸ್ತ್ರದಲ್ಲಿ(ಕೆಮಿಸ್ಟ್ರಿ) 98, ಕನ್ನಡದಲ್ಲಿ-98, ಆಂಗ್ಲಭಾಷೆಯಲ್ಲಿ -95 ಒಟ್ಟು 591 ಅಂಕಗಳನ್ನು ಗಳಿಸಿ ಕಾಲೇಜಿಗೆ ಕೀರ್ತಿ ತಂದಿದ್ದಾನೆ.

ವಿದ್ಯಾರ್ಥಿಯ ಈ ಸಾಧನೆಯನ್ನು ಸಂಸ್ಥೆಯ ಅಧ್ಯಕ್ಷ ಡಾ.ಎಸ್. ಲೋಕೇಶ್, ಕಾರ್ಯದರ್ಶಿ ಶ್ವೇತಾ ಲೋಕೇಶ್, ಪ್ರಾಂಶುಪಾಲರು ಹಾಗೂ ಎಲ್ಲಾ ಸಿಬ್ಬಂದಿ ವರ್ಗದವರು ಅಭಿನಂದಿಸಿದ್ದಾರೆ.

## ಯುದ್ಧದಿಂದ ಪಾಕ್ ಆರ್ಥಿಕತೆಗೆ ಪೆಟ್ಟು: ಪ್ರಧಾನಿ ಶೆಹಬಾಜ್ ಶರೀಫ್

• ಪ್ರಜೋದಯ ವರದಿ



**ಇಸ್ಲಾಮಾಬಾದ್:** ಕಳೆದ ಎರಡು ವರ್ಷಗಳಲ್ಲಿ ಪಾಕಿಸ್ತಾನ ಆರ್ಥಿಕವಾಗಿ ಸಾಕಷ್ಟು ಪ್ರಗತಿ ಸಾಧಿಸಿತ್ತು. ಅಮೇರಿಕಾ-ಇರಾನ್ ನಡುವಿನ ಯುದ್ಧದಿಂದ ದೇಶದ ಅರ್ಥ ವ್ಯವಸ್ಥೆಗೆ ಭಾರಿ ಪೆಟ್ಟು ಬಿದ್ದಿದೆ ಎಂದು ಪಾಕಿಸ್ತಾನ ಪ್ರಧಾನಿ ಶೆಹಬಾಜ್ ಶರೀಫ್ ಅವರು ಬುಧವಾರ ಹೇಳಿದ್ದಾರೆ.

ಇರಾನ್ ಮೇಲೆ ಅಮೇರಿಕಾ ಮತ್ತು ಇಸ್ರೇಲ್ ಫೆಬ್ರುವರಿಯಲ್ಲಿ ದಾಳಿ ಆರಂಭಿಸಿದಾಗಿನಿಂದ ಜಾಗತಿಕ ಮಾರುಕಟ್ಟೆಗಳಲ್ಲಿ ಇಂಧನ ದರದಲ್ಲಿ ವಿಪರೀತ ಹೆಚ್ಚಳವಾಗುತ್ತಿದೆ. ಅದರಿಂದ ಇಂಧನಕ್ಕಾಗಿ ಪಾಕಿಸ್ತಾನ ಮಾಡುತ್ತಿರುವ ವೆಚ್ಚವೂ ಹೆಚ್ಚುತ್ತಿದೆಂದು ಹೇಳಿದ್ದಾರೆ. ಸಚಿವ ಸಂಪುಟ ಸಭೆಯಲ್ಲಿ ಮಾತನಾಡಿದ ಅವರು, ಯುದ್ಧ ದಿಂದಾಗಿ ಉದ್ಭವಿಸಿ ರುವ ಪರಿಸ್ಥಿತಿ ಮೇಲೆ ಕಾರ್ಯಪಡೆಯೊಂದು ನಿಗಾ ವಹಿಸಿದೆ ಎಂದು ಶರೀಫ್ ಹೇಳಿದ್ದಾಗಿ ಜಿಯೊ ಟಿವಿ ವರದಿ ಮಾಡಿದೆ. ಇಂಥಹ ಹಿನ್ನಡೆ ಹೊರತಾಗಿಯೂ ಯುದ್ಧ ನಿರತ ದೇಶಗಳ ನಡುವೆ ಮಾತುಕತೆಗೆ ವೇದಿಕೆ ಕಲ್ಪಿಸಿ, ಪಶ್ಚಿಮ ಏಷ್ಯಾದಲ್ಲಿ ಶಾಂತಿ ನೆಲಸುವಂತೆ ಮಾಡುವುದಕ್ಕೆ ನನ್ನ ಸರ್ಕಾರ ಪ್ರಯತ್ನ ಮುಂದುವರಿಸಲಿದೆ ಎಂದು ಸಭೆಗೆ ತಿಳಿಸಿದ್ದಾರೆ.

ಅಮೇರಿಕಾ ಮತ್ತು ಇರಾನ್ ನಡುವೆ ಶಾಂತಿ ಮಾತುಕತೆಯಲ್ಲಾದ ಪ್ರಗತಿ ಕುರಿತು ಸಭೆಗೆ ವಿವರಿಸಿದ ಶರೀಫ್, ಉಭಯ ದೇಶಗಳ ನಡುವೆ 2ನೇ ಸುತ್ತಿನ ಮಾತುಕತೆಯನ್ನು ಶೀಘ್ರವೇ ಆಯೋಜಿಸಲು ಪಾಕಿಸ್ತಾನ ಯೋಜಿಸಿದೆ. ಬಿಕ್ಕಟ್ಟು ಕೊನೆಗೊಂಡು ಪಶ್ಚಿಮ ಏಷ್ಯಾದಲ್ಲಿ ಶಾಂತಿ ನೆಲಸುವ ವಿಶ್ವಾಸ ಇದೆ ಎಂದಿದ್ದಾರೆ.

## ಮರು ಮೌಲ್ಯಮಾಪನ: ಹೇಮಲತಾಗೆ 591 ಅಂಕ



• ಪ್ರಜೋದಯ ವರದಿ

**ಹಾಸನ:** ನಗರದ ಬ್ರಿಲಿಯಂಟ್ ಪದವಿ ಪೂರ್ವ ಕಾಲೇಜಿನ ದ್ವಿತೀಯ ಪಿಯುಸಿ ವಿದ್ಯಾರ್ಥಿನಿ ಟಿ.ಆರ್. ಹೇಮಲತಾಗೆ ಮರು ಮೌಲ್ಯಮಾಪನದಲ್ಲಿ ಭೌತಶಾಸ್ತ್ರ ವಿಷಯದಲ್ಲಿ 100ಕ್ಕೆ 100 ಅಂಕಗಳನ್ನು ಪಡೆದುಕೊಳ್ಳುವ ಮೂಲಕ ರಾಜ್ಯ ಮಟ್ಟದಲ್ಲಿ 7ನೇ ಸ್ಥಾನ ಹಾಗು ಕಾಲೇಜಿನಲ್ಲಿ ಪ್ರಥಮ ಸ್ಥಾನವನ್ನು ಪಡೆದುಕೊಂಡಿದ್ದಾರೆ.

ಅದರೊಂದಿಗೆ ಅವರ ಒಟ್ಟು ಅಂಕಗಳು 591ಕ್ಕೆ ಏರಿಕೆಯಾಗಿದೆ. ಅವರ ಈ ವಿಶೇಷ ಸಾಧನೆಗೆ ಕಾಲೇಜಿನ ಆಡಳಿತ ಮಂಡಳಿ, ಬೋಧಕ ವೃಂದ ಅಭಿನಂದಿಸಿದೆ.




ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019

CMYK CMYK CMYK CMYK